ಅಚಲ

ತಿಂಗಳ ಪತ್ರಿಕೆ

ಆಗಸ್ಟ್ 2000

ಒಳಗೇನಿದೆ?

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ
ಸಂಪುಟ - 15 ಸಂಚಿಕೆ - 8
ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಆಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ
ಅಚಲ ವಿಳಾಸ ಬದಲಾಗಿದೆ
108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಹೊಸ ಸಹಸ್ರಮಾನದ ಮೊದಲ ಸ್ವಾತಂತ್ರ್ಯೋತ್ಸವದಂದು......

ಈ ಶತಮಾನದ ಮೊದಲ ಸ್ವಾತಂತ್ರ್ಯೋತ್ಸವವು ದೇಶಕ್ಕೆ ಎರಗಿ ಬಂದಿರುವ ಅಪಾಯ, ದೇಶದಲ್ಲಿ ಹೆಚ್ಚುತ್ತಿರುವ ಕ್ರೌರ್ಯ ಮತ್ತು ಆಂತರಿಕ ಅಭದ್ರತೆಗೆ ಹಿಡಿದ ಕೈಗನ್ನಡಿಯಾಗಿದೆ. ದೇಶ ಹಿಂದೆಂದೂ ಕಂಡರಿಯದಂತಹ ಕಟ್ಟೆಚ್ಚರದ ಭದ್ರತಾ ಸೇನೆಯ ನೆರವಿನಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ನಡೆಸಬೇಕಾಗಿದೆಯೆಂದರೆ, ನಮ್ಮ ಬಂಧನದ ತೀವ್ರತೆಯ ಅರಿವಾಗಬಹುದು. ಇಂದು ದೇಶವು ಹಿಂದೆಂದೂ ಎದುರಿಸದಂತಹ ಅತ್ಯಂತ ಕ್ಲಿಷ್ಟ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದೆ. ಕಾಶ್ಮೀರದಲ್ಲಿ ಪಾಕ್ ಬೆಂಬಲಿತ ಭಯೋತ್ಪಾದಕರ ಅಟ್ಟಹಾಸ ಮೇಲೆ ಮೀರುತ್ತಿದ್ದು ಕ್ರೌರ್ಯಕ್ಕೆ, ಜನರ ಗೋಳಿಗೆ ಕೊನೆಯೇ ಇಲ್ಲವಾಗಿದೆ. ನಮ್ಮ ದೇಶದ ಈಶಾನ್ಯ ರಾಜ್ಯಗಳಲ್ಲಿ ಉಲ್ಫಾ ಮತ್ತು ಇನ್ನಿತರ ಸಂಘಟನೆಗಳ ವಿಧ್ವಂಸಕ ಕೃತ್ಯಗಳು ಒಂದು ಕಡೆಯಾದರೆ, ಕಾಡುಗಳ್ಳ ವೀರಪ್ಪನು ಕರ್ನಾಟಕ ಮತ್ತು ತಮಿಳು ಸರ್ಕಾರಗಳಿಗೆ ತಲೆನೋವಾಗಿ ಸವಾಲೊಡ್ಡಿದ್ದಾನೆ.

ಇವೆಲ್ಲಾ ಮನುಷ್ಯ ನಿರ್ಮಿತ ಅವಘಡಗಳಾದರೆ, ಈ ವರ್ಷ ದೇಶವು ಎದುರಿಸಿದ ಜಲ ಪ್ರವಾಹ ಬರಗಾಲ ಹಾಗೂ ರಸ್ತೆ, ವಾಯು ಮತ್ತು ರೈಲು ಅಪಘಾತಗಳು ಮನುಷ್ಯನ ಬದುಕನ್ನು ಅಸ್ಥಿರಗೊಳಿಸುತ್ತಿವೆ. ನಮ್ಮ ದೇಶದ ಸಾರ್ವಭೌಮತ್ವಕ್ಕೆ ಭಾರಿ ಪೆಟ್ಟಾಗಿರುವ ಸರಣಿ ಬಾಂಬ್ ಸ್ಫೋಟ ನಮ್ಮ ದೇಶದ ವಿಭಿನ್ನ ಧರ್ಮೀಯರ ನಡುವೆ ಕಂದಕವನ್ನು ಹೆಚ್ಚು ಮಾಡುತ್ತಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಗಾಢಾಂಧಕಾರದಿಂದ ಕೂಡಿ ಸ್ವಾತಂತ್ರ್ಯ ದಿನಾಚರಣೆ ಕೇವಲ ನೀರಸ ಆಚರಣೆಯಾಗುಳಿಯಿತಷ್ಟೇ ಅಲ್ಲ, ಸರ್ಪಗಾವಲಿನಲ್ಲಿ ನಡೆದ ಆ 'ಉತ್ಸವ' ಭಾರತಮಾತೆಯ ಸಂಕೋಲೆಯನ್ನು ಎತ್ತಿ ತೋರಿಸಿತು.

ಈ ಸಂದರ್ಭದಲ್ಲಿ ಮನನೀಯ ಅಂಶವೊಂದು ಉಳಿದಿದ್ದರೆ, ಅದು ರಾಷ್ಟ್ರಪತಿಗಳ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಮಾಡಿದ ಸಾಂಪ್ರದಾಯಿಕ ಭಾಷಣ. ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ತೀವ್ರ ಕಾಳಜಿ ವ್ಯಕ್ತಪಡಿಸಿದ ರಾಷ್ಟ್ರಪತಿಗಳು ಅವರನ್ನು ಈಗಲೂ 'ಮಾನವರಿಗಿಂತ ಕೀಳಾಗಿ' ನೋಡಿಕೊಳ್ಳುತ್ತಿದ್ದೇವೆ, ಎಂಬ ಅಂಶದ ಬಗ್ಗೆ ಖೇದ ವ್ಯಕ್ತಪಡಿಸಿದರು. ಮಹಿಳೆಯರ ವಿರುದ್ಧದ ಅಪರಾಧಗಳನ್ನು ಕುರಿತು ವ್ಯವಹರಿಸುವಾಗ ಕಾನೂನು ಸಂಸ್ಥೆಗಳೂ ಕೂಡ ಪರಿಣಾಮ ಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ, ಹಾಗೂ ನಮ್ಮ ಕಾನೂನು ಸಹ ಘೋರ ನ್ಯೂನತೆಗಳಿಂದ ಕೂಡಿದೆ ಎಂದು ರಾಷ್ಟ್ರಪತಿಗಳು ಕಳವಳ ವ್ಯಕ್ತಪಡಿಸಿದರು.

ಮಹಿಳೆಯರ ಹಾಗೂ ಬಾಲಕಿಯರ ಮೇಲಿನ ಅಪರಾಧಗಳನ್ನು ಕುರಿತಂತೆ ಒತ್ತಿ ಮಾತನಾಡಿದ ಅವರು 'ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಹಾಗೂ ಶೋಷಣೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪೂರ್ವಾಗ್ರಹ ಮತ್ತು ನಿರ್ದಯತೆಯಿಂದ ಕೂಡಿದ ಕಪ್ಪು ಮೋಡಗಳು ನಮ್ಮ ಸಮಾಜವನ್ನು ಆವರಿಸಿಕೊಂಡಿವೆ.

ರಾಷ್ಟ್ರಪತಿಗಳವರು ಹೇಳಿದಂತೆ ನಮ್ಮ ಸಮಾಜವನ್ನು ಆವರಿಸಿಕೊಂಡಿರುವ ಕಪ್ಪುಮೋಡಗಳ ಅಂಧಕಾರಕ್ಕೆ ನೀರೆರೆಯುವ ಕೆಲಸವನ್ನು ಇಂದು ದೇಶದಲ್ಲಿ ತಲೆ ಎತ್ತಿರುವ ಪುರಾತನ ಕಂದಾಚಾರ ಹಾಗೂ ಸಾಮಾಜಿಕ ಅನಿಷ್ಟ ಪದ್ಧತಿಗಳು ಮಾಡುತ್ತಿವೆ. ಬ್ರಿಟೀಶರ ಕಾಲದಲ್ಲಿ ಸಮಾಜ ಸುಧಾರಕರ ಒತ್ತಡಕ್ಕೆ ಅಕ್ರಮವೆಂದು ಘೋಷಿಸಲ್ಪಟ್ಟ ಬಾಲ್ಯವಿವಾಹವನ್ನು ಇಂದು ದೇಶದ ಕೆಲವು ರಾಜ್ಯಗಳಲ್ಲಿ ನಿರ್ಭಯತೆಯಿಂದ ಹಾಗೂ ವೈಭವದಿಂದ ಆಚರಿಸಲಾಗುತ್ತಿದೆ.

ನಾವು ಐವತ್ತೆರಡು ವರ್ಷಗಳ ಹಿಂದೆ ಗಳಿಸಿದ ಸ್ವಾತಂತ್ರ್ಯ ನಮ್ಮ ಸಮಾಜದ ಎಲ್ಲ ಬಂಧನಗಳನ್ನು ಕಿತ್ತೊಗೆಯುವ ಭರವಸೆಯನ್ನು ನೀಡಿತ್ತು. ಆದರೆ ಇಂದು ಆಗಿರುವುದಾದರೂ ಏನು? ನಮ್ಮ ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಹೇಳಿದಂತೆ ಇಂದು ಜೈಹಿಂದ್ ಅಲ್ಲ, ಜೈ ಅಕ್ಷರ್ ಚಳುವಳಿಯೇ ದೇಶಕ್ಕೆ ಭವಿಷ್ಯದ ಕಿರಣವನ್ನು ತೋರಬಲ್ಲುದು. ಈ ಅಕ್ಷರ ಚಳುವಳಿಯ ನೇತಾರರು ಇಂದು ಮಹಿಳೆಯರಾಗಿದ್ದಾರೆ, ಎಂಬುದು ಸಂತೋಷದ ವಿಷಯ. ರಾಷ್ಟ್ರಪತಿಯವರು ಹೇಳಿದಂತೆ ಅಕ್ಷರ ಚಳುವಳಿ ಮಹಿಳೆಯರಿಗೆ ಸ್ವರ್ಗವನ್ನು ತಂದುಕೊಡದಿದ್ದರೂ ಸ್ವರವನ್ನು ನೀಡಿದೆ. ಈ 'ಸ್ವರ' ಸ್ವಾತಂತ್ರ್ಯದ ಆಕಾಂಕ್ಷೆಯ ಸ್ವರವಾಗಲಿ ಹೊಸ ಮೌಲ್ಯಗಳ, ಹೊಸ ಚೇತನದ, ಹೊಸ ಸಮಾಜದ ನಿರೀಕ್ಷೆಗೆ ದನಿಕೊಡುವ ಸ್ವರವಾಗಲಿ.

- ಎನ್. ಗಾಯತ್ರಿ

'ಸಮಾಜಸೇವೆಗೆ ಗೌರವ ತಂದ ಅರುಣಾ ರಾಯ್

- ನೇಮಿಚಂದ್ರ

ಹುಟ್ಟಿದ್ದು ಮದ್ರಾಸಿನಲ್ಲಿ, ಬೆಳೆದದ್ದು ರಾಜಧಾನಿ ದಿಲ್ಲಿಯಲ್ಲಿ, ಸೇರಿದ್ದು ಭಾರತೀಯ ಆಡಳಿತ ಸೇವೆಯಲ್ಲಿ ಐ.ಎ.ಎಸ್. ಅಧಿಕಾರಿಯಾಗಿ, ಇಂತಹ ಬದುಕಿನ ಸೌಲಭ್ಯ, ಪ್ರತಿಷ್ಠೆ, ಪ್ರಭಾವ, ಹಣ, ಅಧಿಕಾರ, ಎಲ್ಲವನ್ನು ತೊರೆದು ಓರ್ವ ಮಹಿಳೆ ರಾಜಸ್ಥಾನದ ಹಳ್ಳಿಗಾಡಿನಲ್ಲಿ ಕಾರ್ಮಿಕರ, ರೈತಾಪಿ ಜನರ ಬದುಕಿಗಾಗಿ ಹೋರಾಡಲು ಹೊರಟಳು. ಇಪ್ಪತ್ತೈದು ವರ್ಷಗಳಿಂದ ಈ ಹಳ್ಳಿಗಳಲ್ಲಿ ನೆಲೆನಿಂತು, ಸಾಮಾನ್ಯ ಜನರಿಗೆ ತಮ್ಮ ಅಸಮಾನ್ಯ ಅರಿವು ಮಾಡಿಸುತ್ತಿರುವ ಅಸಾಧಾರಣ ಮಹಿಳೆ ಈ ಬಾರಿ ರಾಮನ್ ಮ್ಯಾಗ್ಸೆಸ್ಸೆ ಪಡೆದ ಅರುಣಾ ರಾಯ್

ಅರುಣ 1946ರ ಜೂನ್ 26ರಂದು ಮದ್ರಾಸನಲ್ಲಿ ಹುಟ್ಟಿದರು. ಅರುಣ ಅವರ ಬಾಲ್ಯ ಕಿಶೋರದ ಬಹುಭಾಗ ಕಳೆದದ್ದು ದಿಲ್ಲಿಯಲ್ಲಿ. ತಂದೆ ಜಯರಾಮ್, ತಾಯಿ ಹೇಮಾ ಜಯರಾಮ್. ತಂದೆ ತಾಯಿ ಬಾಲ್ಯದಲ್ಲಿಯೇ ಅರುಣಾಗೆ ಅನುಕಂಪ, ಸಹಾನುಭೂತಿಯನ್ನು ರೂಢಿಸಿದ್ದರು. ಜೊತೆಗೇ ದಿಟ್ಟತನ, ನೈತಿಕ ಆಯ್ಕೆ, ಕ್ರಿಯಾಶೀಲತೆಯನ್ನೂ ಹೇಳಿಕೊಟ್ಟಿದ್ದರು. ರವೀಂದ್ರನಾಥ ಟಾಗೂರರ ನೆರಳಿನಲ್ಲಿ ದುಡಿದಿದ್ದ ಜಯರಾಮ್, ರಾಷ್ಟ್ರೀಯ ಹೋರಾಟದ ಮೌಲ್ಯಗಳನ್ನು ಅರುಣಾಗೆ ರವಾನಿಸಿದ್ದರು. ತಮ್ಮ ಬ್ರಾಹ್ಮಣ ಜಾತಿಯನ್ನು ಸಂಕೇತಿಸುವ 'ಸರ್‌ನೇಮ್' ಕಿತ್ತು ಹಾಕಿದ್ದರು.

ಅರುಣ ರುಕ್ಮಿಣಿ ದೇವಿ ಅರುಂಡೇಲರ ಕಲಾಕ್ಷೇತ್ರದಲ್ಲಿ ಎರಡು ವರ್ಷ ಕಲಿತರು. ಇಲ್ಲಿ ಅರುಣಾ ಕಲಾ ವಿಷಯಗಳಲ್ಲಿನ ತಮ್ಮ ಆಸಕ್ತಿಯನ್ನು ಕಂಡುಕೊಂಡರು. ದಿಲ್ಲಿ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕೆಲ ಕಾಲ ಪ್ರಾಧ್ಯಾಪಕರಾಗಿ ದುಡಿದ ಅರುಣಾ, 1968ರಲ್ಲಿ ಐ.ಎ.ಎಸ್. ಅಧಿಕಾರಿಯಾಗಿ ಸರಕಾರಿ ನೌಕರಿ ಸೇರಿಕೊಂಡರು. ಜನರ ಸೇವೆ ಮಾಡಬಯಸಿದ ಅರುಣಾಗೆ ಇಲ್ಲಿ ಕೈ ಕಟ್ಟಿ ಹಾಕಿದಂಥ ಭಾವ, ಉಸಿರುಕಟ್ಟಿಸಿದಂಥ ವಾತಾವರಣ, ಜನರನ್ನು ನಿರಂತರವಾಗಿ ಕಾಯಿಸುತ್ತಿದ್ದ ಅಧಿಕಾರಿಗಳು. ಕೆಲಸ ಆಗುತ್ತಿದ್ದುದು ಅತ್ಯಲ್ಪ. ಅಲ್ಲಿಯ ಬ್ಯೂರೋಕ್ರಸಿಯಲ್ಲಿ ಜನರ ಸೇವೆ ಮಾಡುವುದು ಅಸಾಧ್ಯವಾಗಿ ಕಂಡಿತು. ಪಾಂಡಿಚೆರಿಯಲ್ಲಿ ಅಡಿಷನಲ್ ಕಲೆಕ್ಟರ್ ಆಗಿದ್ದ ಸಮಯ, ಸ್ಥಳಾಂತರಿಸಲ್ಪಟ್ಟ ಬಡಜನರನ್ನು ನೆಲೆಗೊಳಿಸುವ ಸಾಧ್ಯತೆಯನ್ನು ಪರಿಶೀಲಿಸಲು ತಮ್ಮ ಮುಖ್ಯ ಇಂಜಿನಿಯರ್‌ಗೆ ಅರುಣಾ ಹೇಳಿದ್ದರು. ಈ ವಿಷಯ ತಿಳಿದಾಗ, ಮೇಲಾಧಿಕಾರಿಗಳು ಕೋಪೋದ್ರಿಕ್ತರಾದರು. ಇದೇ ಸಮಯದಲ್ಲಿ ಎಂ.ಜಿ.ಆರ್. ಅವರ ಸ್ನೇಹಿತೆಯಾಗಿ ಮಾತ್ರ ಗುರುತಿಸಲ್ಪಟ್ಟ ಜಯಲಲಿತಾರವರ ಬೆಂಗಾವಲಾಗುವ ಕೆಲಸ ಇವರಿಗೆ ನೀಡಿದ್ದರು! ಜನ ಸಾಮಾನ್ಯರ ಸೇವೆ ಕಿಂಚಿತ್ತೂ ನಡೆಯದ, ಪ್ರಭಾವಶಾಲಿ ಜನರ 'ಬಹುಪರಾಕ್' ಹೇಳುವ ಈ ಕೆಲಸ ಅರುಣಾಗೆ ಬೇಡವಾಯಿತು. ಈ ಸಮಯದಲ್ಲಿ ಸಂಜಿತ್ ರಾಯ್ ಅರುಣಾಗೆ ಪರ್ಯಾಯ ಜೀವನವೊಂದನ್ನು ತೋರಿಸಿದರು. ಈತ 1972ರಲ್ಲಿ 'ಸಮಾಜಸೇವೆ ಮತ್ತು ಸಂಶೋಧನಾಕೇಂದ್ರ'ವನ್ನು ಅಜ್ಮೀರನ ಟಿಲೋನಿಯಾ ಎಂಬ ಗ್ರಾಮದಲ್ಲಿ ಸ್ಥಾಪಿಸಿದ್ದರು. ಹತ್ತಿರದ ಹಳ್ಳಿಗಳಿಗೆ ಆರೋಗ್ಯ ತಪಾಸಣೆ, ಕುಡಿಯುವ ನೀರು, ವಿದ್ಯಾಭ್ಯಾಸ, ಪರ್ಯಾಯ ಶಕ್ತಿ ನೀಡುವ ಉದ್ದೇಶದಿಂದ ಈ ಕೇಂದ್ರ ಆರಂಭವಾಗಿತ್ತು.

ಅರುಣ ದಿಲ್ಲಿ ವಿಶ್ವವಿದ್ಯಾಲಯದ ಇಂದ್ರಪ್ರಸ್ಥ ಕಾಲೇಜಿನಲ್ಲಿ ಓದುತ್ತಿದ್ದಾಗ, ಸಂಜಿತ್‌ರಾಯ್ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆಸಿದ್ದರು. ಕಾಲೇಜಿನಲ್ಲಿದ್ದ ಆ ಸಮಯದಲ್ಲೇ ಪರಸ್ಪರ ಪರಿಚಯವಾಗಿತ್ತು. ಸಂಜಿತ್ ಅರುಣಾರವರನ್ನು ವಿವಾಹವಾಗುವ ಇಚ್ಛೆ ವ್ಯಕ್ತಪಡಿಸಿದರು. ಒಂದು ವರ್ಷ ಸಮಯ ತೆಗೆದುಕೊಂಡ ಅರುಣಾ, ಕಡೆಗೂ ತಮ್ಮ ಒಪ್ಪಿಗೆ ನೀಡಿದರು. 1970ರಲ್ಲಿ ಇಪ್ಪತ್ತು ನಿಮಿಷದ ಸರಳ ವಿವಾಹದಲ್ಲಿ ಅರುಣಾ ಮತ್ತು ಸಂಜಿತ್ ಪತಿ ಪತ್ನಿಯರಾದರು. ಸಮಾಜ ಸೇವೆಯ ಸಮಾನ ಗುರಿ ಹೊಂದಿದ ಈ ದಂಪತಿಗಳು ತಮಗೆ ಸ್ವಂತ ಮಕ್ಕಳು ಬೇಡವೆಂದು ನಿರ್ಧಾರ ಕೈಗೊಂಡರು, ಜಗತ್ತಿನೆಲ್ಲ ಮಕ್ಕಳು ತಮ್ಮವೆಂದು ದುಡಿಯಲು ನಿರ್ಧರಿಸಿದರು. 1975ರಲ್ಲಿ ಅರುಣಾ ಐ.ಎ.ಎಸ್.ಗೆ ರಾಜಿನಾಮೆ ಕೊಟ್ಟರು. 1976ರಲ್ಲಿ ಪತಿಯೊಡನೆ ಟಿಲೋನಿಯಾಗೆ ಬಂದರು. ಸೈಕಲ್ ಮೇಲೆ ಹಳ್ಳಿಯ ಗಲ್ಲಿ ಗಲ್ಲಿಗಳನ್ನು ಅಲೆದರು, ಸ್ಥಳೀಯ ಟಿಲೊನಿಯಾಗೆ ಅರುಣಾ ಮಹಿಳಾ ದೃಷ್ಟಿಕೋನವನ್ನು ನೀಡಿದರು. ಕೃಪಾಕಟಾಕ್ಷಕ್ಕಾಗಿ, ಅನುಗ್ರಹಕ್ಕಾಗಿ ಕಾದು ಕೂರಲಿಲ್ಲ, ನ್ಯಾಯವನ್ನು, ಅಭಿವೃದ್ಧಿಯನ್ನು ಹಕ್ಕಿನಿಂದ ಕೇಳಿದರು.

ಅರುಣಾ ಅವರ ಕರಕುಶಲ ಕಲೆಯ ಹಿನ್ನೆಲೆ ಸಹಾಯಕ್ಕೆ ಬಂತು. ಆದರೆ ಹಳ್ಳಿಯವರು ಪರಸ್ಪರ ಸಹಕಾರದಲ್ಲಿ ಸಂಘಟಿತರಾಗಿ ಕೆಲಸ ಮಾಡಿದರೆ, ಅವರಿಗೆ ಪರಿಚಯಿಸಿದ

ಹೊರ ಮಾರುಕಟ್ಟೆ ಪರಸ್ಪರ ಸ್ಪರ್ಧೆಯನ್ನು ಪೈಪೋಟಿಯನ್ನು ಪ್ರೋತ್ಸಾಹಿಸುತ್ತಿತ್ತು. ಈ ಅನುಭವ ಅರುಣಾಗೆ ಎನ್.ಜಿ.ಓ.ಗಳ ಪರಿಧಿಯಾಚೆಗೆ ಯೋಚಿಸುವಂತೆ ಮಾಡಿತು. ರಾಜಾಸ್ಥಾನ ಸರಕಾರದ 'ಮಹಿಳಾ ಅಭಿವೃದ್ಧಿ ಯೋಜನೆ' ಬಂದಾಗ, ಅರುಣಾ ಅದನ್ನು ರೂಪಿಸುವಲ್ಲಿ ಸಹಾಯ ಮಾಡಿದರು. 'ಸಾಥಿನ್ ಯೋಜನೆ' ಹಳ್ಳಿಗಾಡಿನ ಮಹಿಳೆಯರ ಬದುಕನ್ನು ಸ್ಪರ್ಶಿಸುವ, ಬದಲಿಸುವ ಉದ್ದೇಶದಿಂದ ರೂಪುಗೊಂಡಿತು. ಆದರೆ ಅರುಣಾ ಸರಕಾರದೊಡನೆಯ ತಮ್ಮ ಸಹಕಾರದ ಮಿತಿಯನ್ನು ಅರ್ಥ ಮಾಡಿಕೊಂಡರು. ಒಂದು ಹಂತದ ನಂತರ ಸರಕಾರದ ವಿರುದ್ಧ ಹೋಗುವುದು ಅನಿವಾರ್ಯವಿತ್ತು.

1980ರ ವರ್ಷಗಳನ್ನು ಅರುಣಾ ತಮ್ಮ 'ಸ್ತ್ರೀವಾದಿ ವರ್ಷ'ಗಳೆಂದು ಗುರುತಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ ಅರುಣಾ ಮೂರನೇ ಜಗತ್ತಿನ ಮಹಿಳಾ ಚಳುವಳಿ ಪಾಶ್ಚಿಮಾತ್ಯ ಚಳುವಳಿಗಿಂತ ಗುಣಾತ್ಮಕವಾಗಿ ಬೇರೆ ಇರುತ್ತದೆಂದು ಹೇಳಿದರು. ಆಕೆಯನ್ನು 1985ರಲ್ಲಿ ನೈರೋಬಿಯ ಮಹಿಳಾ ಸಮಾವೇಶಕ್ಕೆ ಆಹ್ವಾನಿಸಿದರು. ಆದರೆ ಅರುಣಾ ಅದೇ ಸಮಯದಲ್ಲಿ ರಾಜಾಸ್ಥಾನದ ಅಜ್ಮೀರ್ ಜಿಲ್ಲೆಯಲ್ಲಿ ಇಡೀ ದೇಶದಿಂದ ಆಗಮಿಸಿದ ಸಾವಿರಾರು ಹಳ್ಳಿಗಾಡಿನ ಮಹಿಳೆಯರೊಡನೆ 'ಮಹಿಳಾಮೇಳ'ವನ್ನು ಯೋಜಿಸಿದ್ದರು. ಭಾಷೆ, ರಾಜ್ಯ, ಸರಹದ್ದುಗಳ ಅಂತರ ಕಳಚಿ ಈ ಮಹಿಳೆಯರು ಹಾಡಿದರು, ಕುಣಿದರು, ಒಂದಾದರು. ತಮ್ಮ ಸಮಾನ ದುಃಖ, ಕಷ್ಟಗಳನ್ನು, ಸವಾಲುಗಳನ್ನು ಹಂಚಿಕೊಂಡರು, ಹೋರಾಟದ ಹಾದಿಯನ್ನು ಯೋಜಿಸಿದರು. ಅರುಣಾಗೆ ಈ ಮಹಿಳಾ ಮೇಳ, ನೈರೋಬಿಯ ಸಮಾವೇಶಕ್ಕಿಂತ ಹೆಚ್ಚು ಮುಖ್ಯವಿತ್ತು. ರಾಜಾಸ್ಥಾನದ ನೆಲದಲ್ಲಿ ಸತಿ ಮತ್ತು ಅತ್ಯಾಚಾರದ ವಿರುದ್ಧ ಮಹಿಳೆಯರ ದನಿ ಎದ್ದಿತು.

1983ರವರೆಗೆ ಪತಿ ಆರಂಭಿಸಿದ್ದ 'ಸಮಾಜ ಸೇವಾ ಮತ್ತು ಸಂಶೋಧನ ಕೇಂದ್ರ'ದಲ್ಲಿ ಅರುಣಾ ಕೆಲಸ ಮಾಡಿದರು. ನಂತರದ ವರ್ಷಗಳಲ್ಲಿ ಸಹ ಸೇವಕರಾಗಿದ್ದ ಶಂಕರ್ ಸಿಂಗ್ ಮತ್ತು ನಿಖಿಲ್ ಡೇ ಅವರೊಡನೆ ಮಧ್ಯ ರಾಜಾಸ್ಥಾನದ ರಾಜಸಮಂಡ್ ಜಿಲ್ಲೆಯ ದೇವದೂಂಗ್ರಿಗೆ ಬಂದರು. ಇಲ್ಲಿ ಹಳ್ಳಿಗರ ವಿಶ್ವಾಸವನ್ನು ಗಳಿಸಿದರು. ಹಳ್ಳಿಯವರು ಸ್ಥಳೀಯ ಠಾಕುರನ ಸರ್ವಾಧಿಕಾರದಿಂದ ಬಿಡುಗಡೆಗೆ ಸಹಾಯ ಬೇಡಿ ಇವರಲ್ಲಿಗೆ ಬಂದರು. ಆ ಠಾಕುರ್ ಹಳ್ಳಿಯ 25 ಹೆಕ್ಟೇರ್ ಜಮೀನನ್ನು ಕಾನೂನುಬಾಹಿರವಾಗಿ ಆಕ್ರಮಿಸಿ ಕುಳಿತಿದ್ದ. ಅಹಿಂಸಾತ್ಮಕ ಹೋರಾಟದ ನಂತರ ಹಳ್ಳಿಯ ಮಹಿಳೆಯರು ಸಹಕಾರ ಸಂಘ ಆ ಜಮೀನಿನ ಮೇಲೆ ನಿಯಂತ್ರಣವನ್ನು ಪಡೆಯಿತು. ಇಲ್ಲಿ ಹಳ್ಳಿಗರು ಒಂದು ಸಣ್ಣ ಅರಣ್ಯವನ್ನು ನೆಟ್ಟು, ಇಂದು ಈ ಸ್ಥಳ ಹಳ್ಳಿಯ ದನಕರುಗಳಿಗೆ ಮೇವು ಒದಗಿಸುತ್ತಿದೆ. ಈ ಹೋರಾಟದ ಯಶಸ್ಸು 1990ರಲ್ಲಿ 'ಮಜದೂರ್ ಕಿಸಾನ್ ಶಕ್ತಿ ಸಂಘಟನೆ'ಯ ಸ್ಥಾಪನೆಗೆ ದಾರಿಯಾಯಿತು. ಹಳ್ಳಿಗಳಲ್ಲಿ ಮೂರು ಅಂಗಡಿಗಳನ್ನು ತೆರೆದರು. ಈ ಅಂಗಡಿಗಳಲ್ಲಿ ದಿನದಿನದ ಬದುಕಿನ ಅಗತ್ಯಗಳನ್ನು ಕೇವಲ ಶೇಕಡಾ ಒಂದರಷ್ಟು ಲಾಭಕ್ಕೆ ಮಾರಾಟ ಮಾಡುತ್ತಿದ್ದ ಸ್ಥಳೀಯ ವ್ಯಾಪಾರಿಗಳಿಗೆ ಸಂಘಟನೆಯ ಅಂಗಡಿಗಳು ಬಹು ಕಿರಿಕಿರಿಯಾದವು. ಅಂಗಡಿ ನಡೆಸುವುದು ಕೇವಲ ಆರಂಭವಾಗಿತ್ತು. ಸಂಘಟನೆ, ಸಾರ್ವಜನಿಕ ವಿಚಾರಣೆಗಳನ್ನು ಏರ್ಪಡಿಸಿತು. ಆ ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನೆಲ್ಲ ಸ್ಥಳದಲ್ಲಿಯೇ ಸಂಘಟನೆ ಪರಿಶೀಲಿಸುತ್ತಿತ್ತು. ಪ್ರಜೆಗಳ ಮಾಹಿತಿ ಪಡೆಯುವ, ತಿಳಿಯುವ ಹಕ್ಕಿನ ಹೋರಾಟ ಆರಂಭವಾಯಿತು. ಈ ಮಾಹಿತಿ ಹಕ್ಕು ಜನಸಾಮಾನ್ಯನ ಮೂಲಭೂತ ಅಗತ್ಯಗಳನ್ನು ಪಡೆಯುವ ಹಾದಿಯಾಗಿತ್ತು. ಅಭಿವೃದ್ಧಿಗೆ ಎಂದು ನಿಗದಿ ಪಡಿಸಿದ ಸರಕಾರದ ಹಣ ಎಲ್ಲಿ ಹೋಗುತ್ತಿದೆ? ಅದನ್ನು ಹೇಗೆ ಖರ್ಚು ಮಾಡುತ್ತಿದ್ದಾರೆ? ಯಾವ ಕೆಲಸಕ್ಕೆ ಹಣ ನೀಡಲಾಗಿತ್ತು? 1994ರಿಂದ ಆರಂಭವಾಗಿ ಸಂಘಟನೆ ಅನೇಕ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳನ್ನು, ವಿಚಾರಣೆಗಳನ್ನು ಏರ್ಪಡಿಸಿತು. ಆ ಗ್ರಾಮಕ್ಕೆಂದು ನೀಡಲಾದ ಯೋಜನೆಗಳು, ಆ ಯೋಜನೆಗಳಿಗೆ ನೀಡಲಾದ ಹಣ, ಖರ್ಚು ಮಾಡಿದ ಹಣ, ನಡೆದಿರುವ ಕೆಲಸ, ಎಲ್ಲದರ ಲೆಕ್ಕವನ್ನು ಸಂಘಟನೆ ಪರಿಶೀಲಿಸಿತು. ಬಹು ಶೀಘ್ರವಾಗಿ ಎಲ್ಲ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಕೆಲಸಕ್ಕೆಂದು ಖರ್ಚು ಮಾಡಿದ ಹಣದಲ್ಲಿಯ ದುರುಪಯೋಗ, ದುರ್ವ್ಯವಹಾರ ಬೆಳಕಿಗೆ ಬಂತು. ಹೆದರಿದ ಆಡಳಿತ ವರ್ಗ ಮಾಹಿತಿ ನೀಡಲು ನಿರಾಕರಿಸಿತು. ಪ್ರತಿಯೊಬ್ಬ ಪ್ರಜೆಗೂ ತಮ್ಮ ಹೆಸರಿನಲ್ಲಿ ಸರಕಾರ ನಡೆಸಿದ ಕೆಲಸವನ್ನು ಕುರಿತು ತಿಳಿಯುವ, ಮಾಹಿತಿಯನ್ನು ಪಡೆಯುವ ಹಕ್ಕಿದೆ ಎಂದು ಸಂಘಟನೆ ಈ ಹಕ್ಕಿಗಾಗಿ ಹೋರಾಡಿತು. ಧರಣೆಗಳನ್ನು, ಸೆಮಿನಾರ್‌ಗಳನ್ನು, ಕಾರ್ಯಾಗಾರಗಳನ್ನು ನಡೆಸಿದರು, ಚಳುವಳಿ ಮುಂದುವರೆಯಿತು. 1995ರಿಂದ ಆರಂಭವಾಗಿ ಐದು ವರ್ಷಗಳ ಕಾಲ 'ರೈಟ್ ಟು ಇನಫರ್ಮೇಷನ್' ಚಳುವಳಿ ನಡೆಯಿತು. ಅವರ ಈ ಚಳುವಳಿ ರಾಜಾಸ್ಥಾನ ಸರಕಾರ 'ರೈಟು ಟು ಇನಫಾರಮೇಷನ್' ಕಾನೂನು' ಜಾರಿಗೆ ತರುವಂತೆ ಮಾಡಿತು. ಇದೀಗ ತಮಿಳುನಾಡು, ಕರ್ನಾಟಕ, ಗೋವಾ, ದಿಲ್ಲಿ, ಮಹಾರಾಷ್ಟ್ರಾ ಕೂಡಾ ಈ ದಿಕ್ಕಿನಲ್ಲಿ ಯೋಚಿಸುತ್ತಿವೆ.

'ಮಜದೂರ್ ಕಿಸಾನ್ ಶಕ್ತಿ ಸಂಘಟನೆ' ಆರಂಭವಾಗಿ ಇಂದಿಗೆ ಹತ್ತು ವರ್ಷವಾಗಿವೆ. ಇಲ್ಲಿ ಶ್ರೇಣೀಕೃತ ವ್ಯವಸ್ಥೆ ಇಲ್ಲ. ಸುಮಾರು 20 ಜನರು ಕೇಂದ್ರ ಕಮಿಟಿಯಲ್ಲಿ ಕೆಲಸ ಮಾಡುತ್ತಾರೆ, ಅವರಲ್ಲಿ ಎಂಟು ಜನ ಪೂರ್ಣಾವಧಿ ಕೆಲಸಗಾರರು. ಸಂಘಟನೆ, ಹೊರಗಿನಿಂದ ಧನಸಹಾಯ ಪಡೆಯುವುದಿಲ್ಲ. ಯಾವುದೇ ರೀತಿಯ 'ಫಂಡ್ಸ' ತೆಗೆದುಕೊಳ್ಳುವುದಿಲ್ಲ. ಹಣವನ್ನು ಸಮುದಾಯದಿಂದ ಸಂಗ್ರಹಿಸುತ್ತಾರೆ, ಜನರ ದಾನ, ದತ್ತಿಗಳಿಂದ ಕೂಡಿಸುತ್ತಾರೆ. ತಮ್ಮ ಸಂಘಟನೆಯ ಹಣ ಕಾಸಿನ ಎಲ್ಲ ವ್ಯವಹಾರಗಳನ್ನು ಪೂರ್ಣ ಪಾರದರ್ಶಕವಾಗಿ ಇಡುತ್ತಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ಓದಿ ತಿಳಿಸುತ್ತಾರೆ. 1997ರಲ್ಲಿ ಅರುಣ ಅವರ ಪತಿ ತಮ್ಮ ಟಿಲೊನಿಯಾದ ಎನ್.ಜಿ.ಓ.ನಲ್ಲಿ 'ಪಾರದರ್ಶಕ ಮೇಳಾ' ಮಾಡಿ, ತಮ್ಮೆಲ್ಲ ಹಣದ ಆಗುಹೋಗುಗಳನ್ನು ಸಾರ್ವಜನಿಕಗೊಳಿಸಿದರು. ಅರುಣ ಎಲ್ಲ ಎನ್.ಜಿ.ಓಗಳೂ ಪಾರದರ್ಶಕವಾಗಿದ್ದು, ಸಮುದಾಯಕ್ಕೆ ತಾವು ಮಾಡುತ್ತಿರುವ ಕೆಲಸವನ್ನು ತೆರೆದು ತೋರಿಸಬೇಕು ಎಂದು ಬಯಸುತ್ತಾರೆ.

ಅರುಣಾ ಅವರದು ಸರಳ ವ್ಯಕ್ತಿತ್ವ. ಹಳ್ಳಿಯ ಹೆಂಗಸರು ಉಡುವ ಸಾಧಾರಣ ಸೀರೆ ಅವರ ಉಡುಪು. 'ಮಜದೂರ್ ಕಿಸಾನ್ ಶಕ್ತಿ ಸಂಘಟನೆ' ಮತ್ತು ಗ್ರಂಥಾಲಯ ಇರುವುದು ದೇವದೂಂಗ್ರಿ ಗ್ರಾಮದ ಸಣ್ಣ ಗುಡಿಸಲಿನಲ್ಲಿ. ಇಲ್ಲಿ ಆರಂಭವಾದಾಗ ವಿದ್ಯುಚ್ಛಕ್ತಿ ಇರಲಿಲ್ಲ, ದೂರವಾಣಿ ಬೇಕೆಂದರೆ ಮೈಲಿಗಳಷ್ಟು ದೂರಕ್ಕೆ ಹೋಗಬೇಕಿತ್ತು. ಈ ಬಗೆಯ ದುಡಿಮೆಯ ನಿಸ್ವಾರ್ಥದ ಹೋರಾಟದ ಬದುಕನ್ನು ಅರುಣಾ ಆಯ್ದುಕೊಂಡು ಇಪ್ಪತ್ತೈದು ವರ್ಷಗಳಾಗಿವೆ. ತನ್ನ ದಿಗ್ವಿಜಯಗಳ ಬಗ್ಗೆ ಸಾಧನೆಗಳ ಬಗ್ಗೆ ಆಕೆ ಮಾತನಾಡುವುದಿಲ್ಲ. 'ನಮ್ಮ ಸಾಧನೆ ಎಂದರೆ ನಾವು ನಮಗೆ ಅನೇಕ ವಿಷಯಗಳನ್ನು ಕಲಿಸಿಕೊಂಡೆವು. ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಅನೇಕ ಜನರು ನಮ್ಮ ಕೆಲಸಕ್ಕೆ ಕೈಗೂಡಿಸುತ್ತಾರೆ ಎಂದು ಅರಿತೆವು.' ಎನ್ನುತ್ತಾರೆ. ಬದುಕಿನಲ್ಲಿ ಎಷ್ಟೋ ಕ್ಷಣಗಳಿದ್ದವು 'ಇದು ಗೆಲುವಿಲ್ಲದ ಹೋರಾಟ' ಎನಿಸಿದ ಕ್ಷಣಗಳು ಎಂದೂ ಹೋರಾಟವನ್ನು, ಚಳುವಳಿಯನ್ನು ಬಿಟ್ಟುಬಿಡಲು ಅರುಣಾ ಸಿದ್ಧವಿರಲಿಲ್ಲ. 'ಮಾಡಬೇಕು, ಏನಾದರೂ ಮಾಡಲೇಬೇಕು' ಅರುಣ ಅವರ ನಿತ್ಯ ಮಂತ್ರ. ತಮ್ಮೆಲ್ಲ ಗೆಲುವು ಸಾಮಾನ್ಯ ಜನರ ಗೆಲುವು ಎನ್ನುತ್ತಾರೆ. ಜನಸಾಮಾನ್ಯರ ಮೂಲಭೂತ ಹಕ್ಕುಗಳಿಗಾಗಿ ಆಕೆಯ ಹೋರಾಟ ನಡೆದಿದೆ.

ಅರುಣಾ ಸದಾ ಹಂಚಿಕೊಂಡು ಬದುಕಿದ ವ್ಯಕ್ತಿ. ಆಕೆಗೆಂದೂ ವೈಯಕ್ತಿಕ ಕೀರ್ತಿ, ಹಣ, ಯಶಸ್ಸು ಮುಖ್ಯವಾಗಿರಲಿಲ್ಲ. ಅರುಣಾ ರಾಯ್ ಅವರಿಗೆ ಈ ವರ್ಷದ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ. ಫಿಲಿಫೈನ್ಸ್‌ನಿಂದ ಫೋನ್, 'ಪ್ರಶಸ್ತಿ ಸ್ವೀಕರಿಸಲು ನಿಮ್ಮ ಒಪ್ಪಿಗೆ ತಿಳಿಸಿ' ಎಂದಾಗ ಅರುಣಾಗೆ ಏನು ಹೇಳಬೇಕೋ ತೋಚದಾಯಿತು. ಅರುಣಾ ಮತ್ತು ಆಕೆಯ ಸಂಸ್ಥೆ 'ಮಜದೂರ್ ಕಿಸಾನ್ ಶಕ್ತಿ ಸಂಘಟನೆಯ' ಸ್ವತಃ ಹಾಕಿಕೊಂಡ ನಿಬಂಧನೆ ಪ್ರಕಾರ ತಮ್ಮ ಸಂಘಟಿತ ಕಾರ್ಯಕ್ಕೆ ಯಾರೊಬ್ಬರದೇ ವೈಯಕ್ತಿ ಹೆಸರಿಗೆ ನೀಡುವ ಪ್ರಶಸ್ತಿಯನ್ನು ತೆಗೆದುಕೊಳ್ಳುವಂತಿಲ್ಲ. ಹಿಂದೆ ದೀವಾಲಿಬೆನ್ ಮತ್ತು ರೋಟರಿ ಪ್ರಶಸ್ತಿ ಅರುಣಾಗೆ ಬಂದಾಗ, ಅದನ್ನು ತಮ್ಮ ಹೆಸರಿಗೆ ಬದಲಾಗಿ, ಸಂಘಟನೆಯ ಹೆಸರಿಗೆ ನೀಡುವಂತೆ ಅರುಣಾ ಕೇಳಿಕೊಂಡದ್ದನ್ನು ಮನ್ನಿಸಿದ್ದರು. ಆದರೆ ಈಗ ಅದು ಸಾಧ್ಯವಿರಲಿಲ್ಲ, ಆಕೆಯ ಸಂಸ್ಥೆ 1990ರಲ್ಲಿ ಸ್ಥಾಪಿತವಾಗುವುದಕ್ಕೂ ಮೊದಲು ಅರುಣಾ 1976ರಲ್ಲಿಯೇ ರಾಜಸ್ಥಾನದಲ್ಲಿ ನಡೆಸಿದ ಸ್ವಯಂಸೇವಕ ಕೆಲಸವನ್ನೂ ಗಣನೆಗೆ ತೆಗೆದುಕೊಂಡು ಪ್ರಶಸ್ತಿ ನೀಡಲಾಗಿತ್ತು. ಪ್ರಶಸ್ತಿ ಸ್ವೀಕರಿಸುವಂತೆ ಸಂಘಟನೆ, ಸಹದ್ಯೋಗಿಗಳು, ಸ್ನೇಹಿತರು ಒತ್ತಾಯಿಸಿದರು. ಬಹಳಷ್ಟು ಚರ್ಚಿಸಿದ ನಂತರ ಅರುಣಾ ಈ ಪ್ರಶಸ್ತಿ ಸ್ವೀಕರಿಸಲು ನಿರ್ಧರಿಸಿದರು. ತಮ್ಮೊಡನೆ ಚುನ್ನಿ ಸಿಂಗ್ ಎಂಬ 'ಮಜದೂರ್ ಕಿಸಾನ್ ಶಕ್ತಿ ಸಂಘಟನೆ'ಯ ಸೇವನಕನನ್ನು ಜೊತೆಯಲ್ಲಿ ಪ್ರಶಸ್ತಿ ಸಮಾವೇಶಕ್ಕೆ ಕರೆದೊಯ್ಯಲು, ಈ ಹಣವನ್ನು ಮಾನವ ಹಕ್ಕು ಮತ್ತು ಪ್ರಜಾಪ್ರಭುತ್ವ ಹೋರಾಟಕ್ಕಾಗಿ ಉಪಯೋಗಿಸಲು ನಿರ್ಧರಿಸಿದರು.

ಪ್ರಶಸ್ತಿ ಬಗ್ಗೆ ಕೇಳಿದ ವರದಿಗಾರರಿಗೆ 'ನನ್ನಂತೆ ಕೆಲಸ ಮಾಡುತ್ತಿರುವ ಅನೇಕರಿದ್ದಾರೆ ಅವರ ಕೆಲಸಗಳನ್ನು ಇನ್ನೂ ಬೆಳಕಿಗೆ ಬಂದಿಲ್ಲ, ಗುರುತಿಸಿಲ್ಲ ಅಷ್ಟೆ' ಎಂದು ವಿನಮ್ರವಾಗಿ ಹೇಳುತ್ತಾರೆ. 'ನನ್ನ ವಿಚಾರಗಳೆಲ್ಲ ಇತರರಿಂದ ಬಂದಿರುವುದು, ನನ್ನ ಧೈರ್ಯ ಈ ಜನರ ಅನ್ಯಾಯದ ವಿರುದ್ಧ ಹೋರಾಡುವ ಭಯವಿಲ್ಲದ ದಿಟ್ಟತನದಿಂದ ಬಂದದ್ದು, ನನ್ನ ಆಶಾವಾದ ಈ ಜನರ ಸತತ ಹೋರಾಟದಿಂದ ಬಂದದ್ದು ನನ್ನ ಉದಾರತೆ ಕೂಡಾ ತಮ್ಮ ಕೊನೆಯ ರೊಟ್ಟಿಯನ್ನೂ ನನ್ನೊಡನೆ ಹಂಚಿಕೊಂಡ ಈ ಬಡ ಜನರಿಂದ ಬಂದದ್ದು,' ಎನ್ನುತ್ತಾರೆ. ನಿಸ್ವಾರ್ಥ ಸೇವೆಯಲ್ಲಿ ಕಾಲು ಶತಮಾನವನ್ನೇ ಕಳೆದ ಅರುಣಾ ಅವರ 'ಪಾರದರ್ಶಕ' ಹೋರಾಟ ಎಲ್ಲ ಸಂಘಟನೆಗಳಿಗೆ ಸ್ಪೂರ್ತಿಯಾಗಬೇಕು.

■

'ಸ್ತ್ರೀವಾದಿ ಸಂಶೋಧಕಿಯಾಗಿ'

- ಎಸ್.ಎನ್. ನಾಗಮಣಿ

ಎಪ್ಪತ್ತರ ದಶಕದ ನಂತರ ಮಹಿಳಾ ಚಳುವಳಿಗಳು ಮಹಿಳೆಯ ಬದುಕಿನ ಮುಖಗಳನ್ನು ಪರಿಚಯಿಸಿವೆ. ಹೆಣ್ಣು ಗಂಡುಗಳ ಸಿದ್ಧಮಾದರಿಗಳ ಪೊಳ್ಳುತನವನ್ನು ತೋರಿಸಿಕೊಟ್ಟಿವೆ. ಮಹಿಳೆಯರ ಅನೇಕ ಸಮಸ್ಯೆಗಳ ಪರಿಚಯ ಮಾಡಿಸಿವೆ. ಸಮಾಜ ಹೆಣ್ಣಿಗೆ ಹೊರಿಸಿರುವ ಹೊಣೆ, ಜವಾಬ್ದಾರಿ, ಅವಳಿಂದ ಸಮಾಜ ನಿರೀಕ್ಷಿಸುವ ಗುಣಗಳ ಕೃತ್ರಿಮತೆಯನ್ನು ಬಯಲಿಗೆಳೆದಿವೆ. ಈ ನಿಟ್ಟಿನಲ್ಲಿ ನಡೆದ ಅನೇಕ ಅಧ್ಯಯನಗಳು ಸಂಶೋಧನೆಗಳು, ಸಮೀಕ್ಷೆಗಳು, ಸತ್ಯಾಂಶಗಳನ್ನು ಹೊರತೆಗೆಯಲು ಪೂರಕವಾಗಿವೆ. ಈ ದಿಕ್ಕಿನಲ್ಲಿ ಅವಳ ಮೇಲೆ ಆಗುತ್ತಿರುವ ದೌರ್ಜನ್ಯ, ಹಿಂಸೆಗಳ ಅನೇಕ ಸ್ಥಳದಲ್ಲಿ ಹೆಣ್ಣಾದ ಜೈವಿಕ ಕಾರಣಕ್ಕೆ ಮಹಿಳೆ ಅನುಭವಿಸುವ ಸಮಸ್ಯೆಗಳು ವಿಶೇಷವಾಗಿ ಲೈಂಗಿಕ ಕಿರುಕುಳವನ್ನು ಕುರಿತಂತೆ ನಡೆಸಿದ ಸಂಶೋಧನೆಯ ಅನುಭವದ ಕಥನವಿದು. ಈ ಸಂಶೋಧನೆಯನ್ನು ದೆಹಲಿಯ 'ಸಾಕ್ಷಿ' ಸಂಸ್ಥೆಯು ಪ್ರಾಯೋಜಿಸಿತ್ತು. ಬೆಂಗಳೂರಿನ 'ಹೆಂಗಸರ ಹಕ್ಕಿನ ಸಂಘ'ದ ಸಂಸ್ಥೆಯ ವತಿಯಿಂದ ಕೈಗೊಂಡ ಈ ಸಂಶೋಧನೆಯ ಕಾರ್ಯಕರ್ತರಲ್ಲಿ ನಾನೂ ಒಬ್ಬಳು.

ಈ ಸಂಶೋಧನೆಯು ಸುಪ್ರೀಂಕೋರ್ಟ್ ಹೊರಡಿಸಿರುವ ಮಾರ್ಗದರ್ಶಿ ಸೂಚನೆಗಳ ಹಿನ್ನೆಲೆಯಲ್ಲಿ ಕೈಗೊಂಡುದಾಗಿತ್ತು. ಭಾರತದಾದ್ಯಂತ ಐದು ಪ್ರಮುಖ ನಗರಗಳಾದ ಬೆಂಗಳೂರು, ಅಲಹಾಬಾದ್, ಭುವನೇಶ್ವರ್, ದೆಹಲಿ, ಶೈಲೇಂದ್ರವರ್‌ಗಳನ್ನು ಸಂಶೋಧನೆಗಾಗಿ ಆಯ್ಕೆಮಾಡಿಕೊಳ್ಳಲಾಗಿತ್ತು. ಈ ಐದು ನಗರಗಳಲ್ಲಿ ವಿವಿಧ ಕೆಲಸಗಳಲ್ಲಿ ತೊಡಗಿರುವ ಉದ್ಯೋಗಿಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಇವರಲ್ಲಿ ಮಾರ್ಗದರ್ಶಿ ಸೂಚನೆಗಳ ಅರಿವು ಎಷ್ಟು ಜನರಿಗಿದೆ? ಲೈಂಗಿಕ ಕಿರುಕುಳವನ್ನು ಇವರು ಹೇಗೆ ಕಾಣುತ್ತಾರೆ? ಮತ್ತು ಲೈಂಗಿಕ ಕಿರುಕುಳದ ಬಗ್ಗೆ ಅವರ ಅನುಭವವೇನು? ಎಂಬುದನ್ನು ಸಂಗ್ರಹಿಸಿ ಆದರ ಆಧಾರದ ಮೇಲೆ ಮಾರ್ಗದರ್ಶಿ ಸೂಚನೆಗಳಿಗೆ ಬದಲಾವಣೆ ತರುವುದು ಅವರ ಮುಖ್ಯ ಉದ್ದೇಶವಾಗಿತ್ತು.

ಸಂಶೋಧನೆಯನ್ನು ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗಿತ್ತು. ಮೊದಲನೆಯದಾಗಿ ವಿವಿಧ ಕೆಲಸದ ಸ್ಥಳಗಳನ್ನು ಗುರುತಿಸಿ, ಸಂದರ್ಶನ ಮಾಡಲು ಮಾಹಿತಿ ಪಡೆಯುವ ಕೆಲಸ ಮಾಡಬೇಕಾಗಿತ್ತು. ಉದ್ಯೋಗಿಗಳ ಸಂದರ್ಶನಕ್ಕೆ ಅನುಮತಿ ಪಡೆಯಲು ಆಯಾ ಕಂಪೆನಿಗಳ, ಕಛೇರಿಗಳ ದೊಡ್ಡ ಅಧಿಕಾರಿಗಳನ್ನು ಭೇಟಿ ಮಾಡಿದೆವು. ಉದ್ಯೋಗಿಗಳೊಡನೆ ವಿಷಯ ಕುರಿತ ಚರ್ಚೆ, ಪ್ರಶ್ನಾವಳಿಯ ತುಂಬುವಿಕೆಗೆ ಒಂದೆರಡು ಗಂಟೆಗಳ ಸಮಯವಾದರೂ ಬೇಕಾಗುತ್ತಿತ್ತು. ಸಂಶೋಧನೆಗೆ ವ್ಯಾಪಕತೆ ಹಾಗೂ ವೈವಿಧ್ಯತೆ ತರಲು ಅಸಂಘಟಿತ ಕ್ಷೇತ್ರದ, ಮನೆಗೆಲಸದವರ, ಕಟ್ಟಡ ಕೆಲಸಗಾರರ, ದೊಡ್ಡ ದೊಡ್ಡ ಕಂಪನಿಗಳ ಐ.ಎ.ಎಸ್. ಅಧಿಕಾರಿಗಳವರೆಗೆ, ವಿಶ್ವದ ಗಮನ ಸೆಳೆಯುತ್ತಿರುವ ಮಾಹಿತಿ ತಂತ್ರಜ್ಞಾನದ ಗಣಕಯಂತ್ರದ ಉದ್ಯೋಗಿಗಳವರೆಗೆ, ದೇಶದ ಉನ್ನತ ಶಿಕ್ಷಣ ಪಡೆಯುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳವರೆಗೆ ಸಂದರ್ಶನ ಮಾಡಿದೆವು. ಒಂದೆರಡು ಘಂಟೆಗಳ ಅವಧಿಯಲ್ಲಿ ಆರು ಪುಟದ ಪ್ರಶ್ನಾವಳಿಯನ್ನು ಅವರ ಮುಂದಿಡುತ್ತಿದ್ದೆವು.

ಒಂದು ಕಡೆಯಿಂದ ಟೆಲಿಫೋನ್ ಡೈರೆಕ್ಟರಿಯನ್ನು ಜಾಲಾಡಿ ಬೆಂಗಳೂರಿನ ಸಾರ್ವಜನಿಕ, ಖಾಸಗಿ ಕಂಪೆನಿಗಳ ವಿಳಾಸ, ದೂರವಾಣಿ ಸಂಖ್ಯೆಗಳೊಂದಿಗೆ ಅಧಿಕಾರಿಗಳ ಹೆಸರನ್ನು ನಾವು ಬಾಯಿಪಾಠ ಮಾಡಿದ್ದೆವು. ಪ್ರತಿಯೊಂದು ಕಂಪೆನಿಯ ದೊಡ್ಡ ಅಧಿಕಾರಿಗಳಿಂದ ಪ್ರಾರಂಭವಾದ ನಮ್ಮ ತನಿಖೆ ಹತ್ತು, ಹನ್ನೆರಡು ಅಧಿಕಾರಿಗಳನ್ನು ಹಾದು ನಂತರ ಒಬ್ಬ ಅಧಿಕಾರಿಣಿಗೆ ತಲುಪುತ್ತಿತ್ತು. (ಆ ಹತ್ತು ಹನ್ನೆರಡು ಮೇಲಿನ ಅಧಿಕಾರಿಗಳೆಲ್ಲ ಪುರುಷರು!)

ಈ ನಿಟ್ಟಿನಲ್ಲಿ ಮೊದಲು ಫೋನಾಯಿಸಿದ್ದು ಎಚ್.ಎ.ಎಲ್‌ಗೆ. ಅಲ್ಲಿ ಕೆಲಸ ಮಾಡುವ ಕನ್ನಡದ ಕತೆಗಾರ್ತಿಯೊಬ್ಬರನ್ನು ಹಿಡಿದು ಸಲಹೆ ಕೇಳಿದೆ. ''ಹೌದಮ್ಮ, ಅಂಥದೊಂದು ಸಂಶೋಧನೆ ನಡೆಯಬೇಕಿದೆ. ನೀವು... ಸಂಪರ್ಕಿಸಿ'' ಎಂದು ಮತ್ತೊಬ್ಬ ಅಧಿಕಾರಿಣಿಯತ್ತ ಕೈ ತೋರಿಸಿದರು. ಆ ಅಧಿಕಾರಿಣಿ ತಮಗೆ ಅಷ್ಟು ಅಧಿಕಾರವಿಲ್ಲವೆಂದು ಮತ್ತೋರ್ವ ದೊಡ್ಡ ಅಧಿಕಾರಿಯನ್ನು ಸೂಚಿಸಿ ಕೈ ಚೆಲ್ಲಿದರು. ಆ ಅಧಿಕಾರಿ ಫೋನಲ್ಲಿ ಸಿಕ್ಕರು "sexual harassment at workplace" ಪದ ಕೇಳುತ್ತಿದ್ದಂತೆ, ಆ ಕಡೆಯ ಧ್ವನಿ ಗಾಭರಿಯಿಂದ "No, No, we don't do" ಎಂದಿತು ಆಗ ಅವಕ್ಕಾದ ನಾನು "No sir I am not telling that, we are doing a survey..." ಎಂದು ವಿವರಿಸಿದೆ. ಆತ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿ ತಮ್ಮ ಜನರಲ್ ಮ್ಯಾನೇಜರ್‌ರವರತ್ತ ಗುರಿ ಮಾಡಿದರು. ಫೋನ್ ಮಾಡಿ ಅವರಿಲ್ಲವೆಂದು ಹೇಳಿಸಿಕೊಂಡು ಬೇಸತ್ತೆವು.

ಎನ್.ಜಿ.ಇ.ಎಫ್‌ಗೆ ಫೋನಾಯಿಸಿದೆವು- "ನೋಡಿ ಸಾರ್ ನಾವೊಂದು ಅಧ್ಯಯನ ಕೈಗೊಂಡಿದೀವಿ. ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳ ಅಂತ. ಈ ಅಧ್ಯಯನದ ವಿಷಯವಾಗಿ ನಿಮ್ಮ ಕಂಪೆನಿಯಲ್ಲಿ ಅವಕಾಶ ಮಾಡಿಕೊಡಬೇಕು ಎಂದು ವಿನಯದಿಂದ ಕೇಳಿದಾಗ ಅವರ 'ಲೈಂಗಿಕ ಕಿರುಕುಳ' ಶಬ್ದವನ್ನು ಮತ್ತೆ ಮತ್ತೆ ಕೇಳಿ ತಿಳಿದುಕೊಂಡರು. ನನ್ನ ಅಚ್ಚಗನ್ನಡ ಆತನನ್ನು ತಬ್ಬಿಬ್ಬು ಮಾಡಿದಂತೆನಿಸಿತು. sexual harassment at workplace ಎಂದೆ. 'ಹೌದಾ ಮೇಡಂ ಬನ್ನಿ ನೋಡಿ ನಿಮಗೇ ಗೊತ್ತಾಗುತ್ತೆ. ಯಾರು ಮಾಡಿದರೆಂದು' ಎನ್ನುವುದೇ! ಹೆಚ್.ಎಂ.ಟಿ.ಯ ಮ್ಯಾನೇಜಿಂಗ್ ಡೈರೆಕ್ಟರನ್ನು ಹುಡುಕಿ ಫೋನಾಯಿಸಿದೆ. 'ಯಾರ್ರೀ, ನಿಮಗೆ ಫೋನ್ ನಂಬರ್ ಕೊಟ್ಟವರು? ನಮ್ಮಲ್ಲಿ ಅಂತ ಯಾವ ಕೆಲಸಗಳೂ ಇಲ್ಲ' ಎಂದು ಖಾರವಾಗಿ ನುಡಿದು ಫೋನ್ ಕುಕ್ಕಿದರು!

ಯಾವುದೇ ಕಂಪೆನಿಗೆ ಫೋನಾಯಿಸಿ, ಸಂಕಪರ್ಕಿಸಿ ಮಾತಾಡಿದರೂ sexual harassment ಎನ್ನುತ್ತಿದ್ದಂತೆಯೇ ಅವರೆಲ್ಲ ಗಾಭರಿಯಿಂದ 'No, No, don't ಎಂದು ನುಡಿಯುತ್ತಿದ್ದರು. ಸುಮಾರು ಯಾವ ಕಂಪೆನಿ, ಕಛೇರಿಯು ನಮಗೆ ಅನುಮತಿ ಕೊಡಲಿಲ್ಲ. ಸಹಾನುಭೂತಿಯಿಂದ ಕೇಳಿದವರೇ ಇರಲಿಲ್ಲ sexual harassment ಶಬ್ದ ಕಿವಿಗೆ ಬೀಳುತ್ತಿದ್ದಂತೆಯೇ ಅಲ್ಲಿ ಗಾಭರಿ, ನಿರಾಕರಣೆ ನಮ್ಮನ್ನು ಚಿಂತೆಗೆ ಹಚ್ಚಿತು. ಹೊಸ ಶಬ್ದಗಳಿಗೆ ತಡಕಾಡಿದೆವು. ಆಗ sexual harassment ಬದಲು women at workplace ಬಂತು. ಆ ನಂತರ ನಮ್ಮ ಪರಿಚಯವನ್ನು ಹೀಗೆ ಶುರು ಮಾಡಿದೆವು. 'ಸಾರ್, ನಾವು ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರು ಎಂದು ಒಂದು ಸಮೀಕ್ಷೆ ನಡೆಸುತ್ತಿದ್ದೇವೆ ಹಾಗಾಗಿ ನಿಮ್ಮ ಕಂಪೆನಿಯಲ್ಲಿ ಒಂದಷ್ಟು ಉದ್ಯೋಗಿಗಳನ್ನು ಸಂದರ್ಶನ ಮಾಡಲು ಅವಕಾಶ ಮಾಡಿಕೊಡಿ' ಎಂದು ಅನುನಯದಿಂದ ಬಲೆ ಒಡ್ಡಿದ್ದೆವು. ಆ ನಂತರ ಒಂದಷ್ಟು ಅವಕಾಶಗಳು ನಮ್ಮ ಬಲೆಯೊಳಗೆ ಬೀಳುವ ಸೂಚನೆ, ಲಕ್ಷಣಗಳು ಕಂಡು ಬಂದವು.

ಒಂದು ದಿನ ಮಳೆ ಹನಿಯುತ್ತಿತ್ತು. ಬಿ.ಇ.ಎಂ.ಎಲ್ ಕಂಪೆನಿಯೊಂದರ ಅಧಿಕಾರಿಯೊಬ್ಬರನ್ನು ಭೇಟಿ ಮಾಡಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದೆ. ಸ್ವೆಟರ್ ಹಾಕಿ, ಬ್ಯಾಗು ಏರಿಸಿ ಆಟೋ ಹಿಡಿದು ಹೊರಟೆ. ಅರ್ಧದಾರಿಯಲ್ಲಿ ಆಟೋ ಕೆಟ್ಟಿತು. ರಸ್ತೆಯು ನಿರ್ಜನವಾಗಿದ್ದು ಆಟೋಗಳು ಯಾವುದೂ ಕಾಣಿಸಲಿಲ್ಲ. ಅಧಿಕಾರಿಯನ್ನು ಭೇಟಿ ಮಾಡಲು ತೆಗೆದುಕೊಂಡಿದ್ದ ಸಮಯಕ್ಕೆ ಕೇವಲ ಹದಿನೈದು ನಿಮಿಷಗಳಿದ್ದವು. ಒಂದಷ್ಟು ದೂರ ಮಳೆಯಲ್ಲೇ ನಡೆದೆ. ಅಂತೂ ಕಛೇರಿ ತಲುಪಿದ್ದಾಯಿತು ಸ್ವಾಗತಕಾರಿಣಿ ಬಳಿಗೆ ಸರಿದು 'ನಾನು...ಹೆಂಗಸರ ಹಕ್ಕಿನ ಸಂಘದಿಂದ ಬಂದಿರುವೆ ಎಂದು ಪರಿಚಯ ಶುರುಮಾಡಿದ್ದೆನಷ್ಟೆ ಮಾತು ಪೂರ್ತಿಯಾಗಿರಲಿಲ್ಲ. ಆಕೆ ಜೋರಾಗಿ ನಗುತೊಡಗಿದರು. ಏನ್ರೀ...ಏನ್ರೀ...ಯಾವ ಸಂಘ...ಹೆಂಗಸರ...ಆಕೆ ಓಹೋ.. ಎಂದು ಮತ್ತಷ್ಟು ಜೋರಾಗಿ ನಕ್ಕರು. ಅಲ್ಲಿ ಕಂಪ್ಯೂಟರ್ ಮುಂದೆ ಕುಳಿತಿದ್ದ ಠಾಕು ಠೀಕಿನ ಠೀವಿಯಲ್ಲಿದ್ದವಳು ಎದ್ದು ಬಂದು 'ಏನ್ರೀ ನಿಮಗೆ ಬೇರಾವ ಕನ್ನಡದ ಪದವೂ ಸಿಗಲಿಲ್ಲವೇನ್ರೀ? ಎಂದು ತರಾಟೆಗೆ ತೆಗೆದುಕೊಂಡಳು.

ಬೆಂಗಳೂರು ಡೈರಿಗೆ ಹೋಗಿ ಒಂದು ಕಾರ್ಯಕ್ರಮಕ್ಕಾಗಿ ಮನವಿ ಸಲ್ಲಿಸಿದೆವು. ಅಲ್ಲಿ ಸರ್ಕಾರದಿಂದ ಸುತ್ತೋಲೆ ಬಂದು ಒಂದು ವರ್ಷವೇ ಸಂದಿದ್ದರೂ, ಅಲ್ಲಿ ಯಾವುದೇ ಸಮಿತಿ ರಚನೆಯಾಗಿರಲಿಲ್ಲ. ಅದಿರಲಿ, ಯಾರಿಗೂ ಅದರ ಅರಿವು ಇದ್ದಂತೆಯೂ ಕಾಣಲಿಲ್ಲ. ನಾವು ಹೋಗಿ ಹೇಳಿದ ನಂತರ ನೆನೆಗುದಿಗೆ ಬಿದ್ದಿದ್ದ ಹಳೆಯ ಸುತ್ತೋಲೆ ತೆಗೆದು ಸರಸರನೆ ಒಂದು ತಾತ್ಕಾಲಿಕ ಸಮಿತಿ ರಚನೆ ಮಾಡಿ ನಮಗೆ ಒಂದು ಗಂಟೆ ಕಾಲ ಸಂದರ್ಶನಕ್ಕೆ ಕಾಲಾವಕಾಶ ನೀಡಿದರು. ಸಮಯಕ್ಕೆ ಸರಿಯಾಗಿ ಹೋಗಿ ತಲುಪಿದೆವು. ಅಲ್ಲಿ ನಾವು ಹೋದಾಗ ಹಿಂದೆ ಸಂಪರ್ಕಿಸಿದ್ದ ವ್ಯಕ್ತಿಯೇ ಇರಲಿಲ್ಲ. ಆಗ ಸಮಿತಿ ಸದಸ್ಯರನ್ನು ಹುಡುಕಿ ಅಲ್ಲಿ ಇಲ್ಲಿ 'ದಣಿವಾರಿಸಿಕೊಳ್ಳುತ್ತಿದ್ದ ಕಾರ್ಮಿಕರನ್ನು ಒಟ್ಟುಗೂಡಿಸಿದೆವು. ಎಲ್ಲಿದ್ದರೋ ಕಾರ್ಮಿಕ ನಾಯಕರು ಹಾಜರಾದರು. 'ಇದು ಸರಿಯಲ್ಲ ಮೇಡಂ, ನೀವು ಯಾವುದೇ ಕಾರ್ಯಕ್ರಮವನ್ನು ಮಾಡಲು ಮೊದಲು ನಮ್ಮನ್ನು ಸಂಪರ್ಕಿಸಿ ಎಲ್ಲ ರೀತಿಯ ನೆರವು ಒದಗಿಸುತ್ತೇವೆ, ಎಂದರು. ಬಾದಾಮಿ, ಹಾಲು, ಫೇಡ ತಿನ್ನಿಸಿದರು. ಪ್ರಶ್ನಾವಳಿಗಳನ್ನು ನಮ್ಮಿಂದ ಪಡೆದು 'ಹೋಗಿ ಇವನ್ನು ನಾವು ತುಂಬಿಸಿ ಕಳುಹಿಸಿಕೊಡುತ್ತೇವೆ' ಎಂದು ಆಶ್ವಾಸನೆ ಕೊಟ್ಟರು. ನಾವು ಅವರಿಗೆ ಕೊಟ್ಟ ಇಪ್ಪತ್ತೆಂಟು ಪ್ರಶ್ನಾವಳಿಗಳಲ್ಲಿ ಅನೇಕ ದೂರವಾಣಿಯ ಕರೆಗಳ ನಂತರ ನಮಗೆ ತಲುಪಿದುದು ಆರು ಮಾತ್ರ.

ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನದ ವಿಶ್ವವಿದ್ಯಾಲಯದ ಆಫೀಸು ಹತ್ತಿರದಲ್ಲೇ ಇತ್ತು. ಹೋಗಿ ಕುಲಪತಿಯವರನ್ನು ಭೇಟಿ ಮಾಡಿದೆವು ಆಸಕ್ತಿ ತೋರಿಸಿ ಒಂದೆರಡು ಗಂಟೆಗಳ ಕಾಲ ಅವಕಾಶ ಮಾಡಿಕೊಡುವುದಾಗಿ ಒಪ್ಪಿಕೊಂಡರು. ವಾರಗಳ ನಂತರ ಒಂದು ಪತ್ರ ಬಂತು. ಸಂಶೋಧಕರಾದ ನಮ್ಮಿಬ್ಬರ ಹೆಸರನ್ನೂ ಆ ಪತ್ರದಲ್ಲಿ ನಮೂದಿಸಲಾಗಿತ್ತು. 'ಯಾವುದೇ ಹಣಕಾಸಿನ ಸಹಾಯ

ಅಪೇಕ್ಷಿಸದೆ ಮಾಹಿತಿ ಸಂಗ್ರಹಿಸಿಕೊಳ್ಳಲು' ನಮಗೆ ಅವಕಾಶ ನೀಡಲಾಗಿತ್ತು. ಮಾರನೇ ದಿನ ಕುಲಸಚಿವರನ್ನು ನೋಡಲು ಹೊರಟೆವು ನಮ್ಮನ್ನು ಕಂಡಕೂಡಲೇ ಆತ "ಓಹೋ... ನೀವೇನಾ ಹೆಂಗಸರ ಹಕ್ಕಿನ ಸಂಘದವರು! ನೀವು ಜಗಳವಾಡವಾರದೆಂದು ನಿಮ್ಮಿಬ್ಬರ ಹೆಸರನ್ನೂ ಪತ್ರದಲ್ಲಿ ಬರೆದಿದ್ದೆ! ಎಂದರು ಆತ ಏನು. ಹೇಳುತ್ತಿರಬಹುದೆಂದು ಕಕ್ಕಾಬಿಕ್ಕಿಯಾದೆ. 'ನಾವೇನು ಜಗಳವಾಡುವುದಿಲ್ಲ' ಎಂದೆವು 'ನನಗೆ ತಿಳಿಯದೆ ನಮ್ಮ ಮನೆಯಲ್ಲಿ ಹೆಂಗಸರು ಎಷ್ಟು ಜಗಳವಾಡುತ್ತಾರೆಂದು, ಆಗ ಕೋಪ ಹೊತ್ತಿಕೊಂಡು ಉರಿಯಿತು. ಆಗ ಬೇಕಾದ ಕೆಲಸ ನೆನೆದು ಮೌನವಾದೆವು. 'ಸರಿ ನಾಳೆ ಎರಡು ಗಂಟೆಗೆ ಸರಿಯಾಗಿ ಬಂದು ಬಿಡಿ, ಎಲ್ಲ ಏರ್ಪಾಟು ಮಾಡುತ್ತೇನೆ' ಎಂದರು. ಮಾರನೇ ದಿನ ಎರಡು ಘಂಟೆಗೆ ಹೋಗಿ ನೋಡಿದಾಗ ಛೇಂಬರಿನಲ್ಲಿ ಯಾರೂ ಕಾಣಿಸಲಿಲ್ಲ. ಊಟಕ್ಕೆ ಹೋಗಿದ್ದಾರೆ, ಎಂಬುದು ತಿಳಿದು ಕಾಯಲು ಕುಳಿತೆವು. ಕಾದೆವು, ಕಾದೆವು, ಮೂರಾಗುತ್ತಾ ಬಂದರೂ ಒಬ್ಬರ ಸುಳಿವಿಲ್ಲ. ನಮ್ಮೊಡನೆ ಮಾತಾಡಿ ಸಮಯ ನಿಗಧಿ ಮಾಡಿದ್ದ ವ್ಯಕ್ತಿಯ ಪತ್ತೆಯೇ ಇರಲಿಲ್ಲ! ಇತರರಾರೂ ನಮ್ಮೆಡೆಗೆ ದೃಷ್ಟಿ ಹರಿಸಲಿಲ್ಲ. ಕುಲಪತಿಯಾಗಲೀ, ಉಪಕುಲಸಚಿವರಾಗಲೀ ಆ ದಿನ ಇರಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆಂದು ಮೆಟ್ಟಲಿಳಿದೆವು.

ಮಾಹಿತಿ ತಂತ್ರಜ್ಞಾನದ ಕಂಪೆನಿಗಳ ಮೆಟ್ಟಿಲು ಹತ್ತಿ ಇಳಿದದ್ದೇ ಬಂತು. ದೂರವಾಣಿ ಬಿಲ್ಲು ಏರಿದ್ದೇ ಬಂತು. ಯಾವ ಕರೆ, ಭೇಟಿಯೂ ಫಲಿಸಲಿಲ್ಲ. ಕನ್ನಡ ಉದಯೋನ್ಮುಖ ಕತೆಗಾರರ ವೈಯಕ್ತಿಕ ಪರಿಚಯದಿಂದ ಜೆನಿಸಿಸ್ ಎಂಬ ಕಂಪೆಯಿಯಲ್ಲಿ ಆಫೀಸಿನ ಅವಧಿ ಮುಗಿದ ನಂತರ ಒಂದು ಗಂಟೆ ಸಮಯ ದೊರೆಯಿತು. ನಮ್ಮ ಸಂಸ್ಥೆಯ ನಿರ್ದೇಶಕರ ಸ್ನೇಹಿತರಿಂದ ಕಾಂಪ್ಯಾಕ್ಟ್ ಕಂಪೆನಿಯ ಸಂಪರ್ಕ ಸಿಕ್ಕಿತು.

ಕೆಲವು ಅಧಿಕಾರಿಗಳು ಕೇಳಿದ ಕೂಡಲೇ ಸಹಕರಿಸಿದ್ದು ಉಂಟು. ಕೆ.ಎಂ.ಎಫ್‌ನವರಿಗೆ ನಾವು ಹೇಳಿದಾಗ ಅವರ ನಿರ್ದೇಶಕರು ಮುಕ್ತವಾಗಿ ಮಾತನಾಡಿ ಅಂಥದೊಂದು ಸಂಶೋಧನೆ ನಡೆಯಬೇಕೆಂದು ಪ್ರೋತ್ಸಾಹಿಸಿದರು. ತಮ್ಮ ಸಂಸ್ಥೆಯಲ್ಲಿ ಒಂದು ಗಂಟೆ ಅವಕಾಶ ಮಾಡಿಕೊಟ್ಟರು. ಬಿ.ಎಚ್.ಇ.ಎಲ್‌ನವರು, ಪಿ.ಟಿ.ಐನವರು ಸಾವಧಾನವಾಗಿ ಆಲಿಸಿ, ಅನುಕೂಲ ಮಾಡಿಕೊಟ್ಟರು.

ಸಂದರ್ಶನಕ್ಕೆ ಒಳಗಾದವರು ನಮ್ಮ ಕೆಲಸವನ್ನು ಅನುಮಾನದಿಂದ ನೋಡಿದಂತೆ ಮೆಚ್ಚುಗೆಯ ಮಾತೂ ಆಡಿದ್ದಾರೆ. ಸೆಷನ್ ಮುಗಿದನಂತರ ಮಹಿಳೆಯರು ನಮ್ಮೊಡನೆ ಅವರ ವೈಯಕ್ತಿಕ ನೋವು ನಲಿವುಗಳನ್ನು ಹಂಚಿಕೊಂಡಿದ್ದಾರೆ. ನಮ್ಮನ್ನು ಉತ್ತಮ ಕೆಲಸ ಮಾಡುತ್ತಿದ್ದೀರೆಂದು ಅಭಿನಂದಿಸಿದ್ದಾರೆ. ಸರ್ಕಾರಿ ವಕ್ತಾರರೆಂದು ಭಾವಿಸಿ ನಮ್ಮಲ್ಲಿ ಸರ್ಕಾರಿ ಸುತ್ತೋಲೆ ಇಲ್ಲವೆಂದು ತರಾಟೆಗೆ ತೆಗೆದುಕೊಂಡು ಮಹಿಳಾ ವಿಭಾಗದ ಕಾರ್ಯದರ್ಶಿಯಿದ್ದಾರೆ. "ಇಲ್ಲಿಯವರೆಗೆ ನಾವ್ಯಾರು ಇಂಥ ಯೋಚನೆಯನ್ನೇ ಮಾಡಿರಲಿಲ್ಲ. ನೀವು ಬಂದು ನಿಜವಾಗಿ ಕಿರುಕುಳ ನಡೆಯುವಂತೆ ಮಾಡಿದ್ದೀರಿ! ಎಂದು ಸ್ನಾತಕೋತ್ತರ ವಿದ್ಯಾರ್ಥಿಯೊಬ್ಬಳು ಬೈದಿದ್ದಾಳೆ. 'ನಿಮಗೆ ಇಂಥ ಸೂಕ್ಷ್ಮ ವಿಷಯಗಳನ್ನು ಮಾತಾಡುವುದು ಸುಲಭ. ನಿಮಗೆ ಗಂಡಸರ ಜೊತೆ ಕೆಲಸ ಮಾಡಿ ಗೊತ್ತಿಲ್ಲ' ಎಂದು ವ್ಯಥೆಯಿಂದ ಉದ್ಯೋಗಿಯೊಬ್ಬರು ನಮ್ಮನ್ನು ಆಕ್ಷೇಪಿಸಿದ್ದಾರೆ. ಸಂಪೂರ್ಣ ಪುರುಷರೇ ಇದ್ದ ಸೆಷನ್‌ನಲ್ಲಿ ಹೆಣ್ಣಾದ ಕಾರಣಕ್ಕೆ ಮಹಿಳೆಯರು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ಅನುಭವಿಸುತ್ತಾರೆ ಎಂಬುದನ್ನು ಒಪ್ಪಿಕೊಂಡಿದ್ದಾರೆ

ಪ್ರಶ್ನಾವಳಿಯ ಕೊನೆಯಲ್ಲಿ 'ನಿಮ್ಮ ಇತರ ಸಲಹೆ ಸೂಚನೆಗಳನ್ನು ಕೊಡಿ' ಎಂದಿದ್ದ ಪ್ರಶ್ನೆಗೆ 'ಹೆಣ್ಣು ಭಾರತೀಯಳಾಗಿರಬೇಕು', 'ಪುರುಷರನ್ನು ಉದ್ರೇಕಗೊಳಿಸುವ ಉಡುಪು ತೊಡಬಾರದು', 'ನಮ್ಮ ಭವ್ಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಯಾವುದೇ ಅನ್ಯಾಯವಾಗಿಲ್ಲ', 'ಹೆಣ್ಣಿಗೆ ಮೀಸಲಾತಿ ಇರಬಾರದು' ಎಂದು ಬರೆದು ನಮ್ಮನ್ನು ಬೆಚ್ಚಿ ಬೀಳಿಸಿದ ಪುರುಷರಿದ್ದಾರೆ. ನಮ್ಮ ಯಾವ ಮಾತಿಗೂ ಪ್ರತಿಕ್ರಿಯಿಸದೆ, ಇಡೀ ಎರಡು ಗಂಟೆ ಕಾಲ ಮೌನವಾಗಿ ಕುಳಿತು ನಮ್ಮನ್ನು ದಂಗುಬಡಿಸಿದ 'ಸಂವಹನ' ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದಾರೆ. ನಮ್ಮ ಸೆಷನ್‌ನಲ್ಲಿ ಒಂದು ಕನ್ನಡದಲ್ಲಿ ಮಾತಾಡಲು ಹೊರಟಾಗ 'ಕನ್ನಡವಾದರೆ ನಮಗೆ ಬೇಡವೇ ಬೇಡ' ಎಂದು ಎದ್ದು ಹೋದ ಉದ್ಧಟರಿದ್ದಾರೆ. 'ನೀವು ನಿಜವಾಗಿಯೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ' ಎಂದು ಉಚಿತ ಸಲಹೆ ನೀಡಿದವರಿದ್ದಾರೆ. ಸುಪ್ರಿಂಕೋರ್ಟಿನ ಮಾರ್ಗದರ್ಶಿ ಸೂಚನೆಗಳು ಸಲಿಂಗ ಕಿರುಕುಳದ ಬಗ್ಗೆ ಮಾತಾಡುತ್ತಿಲ್ಲವೆಂದು ಆತಂಕ ವ್ಯಕ್ತಪಡಿಸಿದವರಿದ್ದಾರೆ. ಲೈಂಗಿಕ ಕಿರುಕುಳ ತಮ್ಮ ಕೆಲಸದ ಸ್ಥಳದ ಅನಿವಾರ್ಯತೆಯಾಗಿ ಬಿಟ್ಟಿರುವ ಬಗ್ಗೆ ಸಂಕಟದಿಂದ ತೋಡಿಕೊಂಡ ಮಹಿಳೆಯರಿದ್ದಾರೆ. ಸಮಿತಿಯ ರಚನೆ, ಅದರ ಕಾರ್ಯನಿರ್ವಹಣೆಯ ಶೈಲಿಯನ್ನು ಕುರಿತಂತೆ ಅನುಮಾನ ವ್ಯಕ್ತಪಡಿಸಿದ ಕಾಳಜಿ ಪರರಿದ್ದಾರೆ. ಸಂಶೋಧನೆಯ ಫಲಿತಾಂಶ ತಿಳಿಯುವ ಕುತೂಹಲಿಗಳಿದ್ದಾರೆ. ಆದರೂ ಹಲವಾರು ಸ್ಥಳಗಳಲ್ಲಿ ಮಾರ್ಗದರ್ಶಿ ಸೂಚನೆಗಳು ಬಂದ ನಂತರ ಸಮಿತಿ ರಚನೆಯಾಗಿರುವುದು ಒಂದು ಇತ್ಯಾತ್ಮಕ ಬದಲಾವಣೆಯೇ. ■

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ

ಸಂಘಟಿತ ಶಕ್ತಿಯೇ ಸಮುದಾಯದ ಏಳಿಗೆಯ ಮೂಲ

ಸ್ವರ್ಣ ಜಯಂತಿ ಶಹರಿ ಯೋಜನೆ ಎಂದರೇನು?

ಪಟ್ಟಣದಲ್ಲಿ ಬಡತನ ರೇಖೆಗಿಂಗ ಕೆಳಗಡೆ ವಾಸಿಸುತ್ತಿರುವ (ಕಡುಬಡವರು ಕುಟುಂಬಗಳಿಗೆ ಸಾಂಘಿಕ ವ್ಯವಸ್ಥೆ ಮೂಲಕ ಆರ್ಥಿಕ ಬಲ ನೀಡಿ ಆ ಮೂಲಕ ಸಮುದಾಯದ ಅಭಿವೃದ್ಧಿ ಸಾಧಿಸುವ ಯೋಜನೆ ಇದು. ಈ ಯೋಜನೆ 1-12-1997ರಿಂದ ರಾಷ್ಟ್ರಾದ್ಯಂತ ಜಾರಿಯಲ್ಲಿದೆ.

ಈ ಯೋಜನೆಯ ಫಲಾನುಭವ ಪಡೆಯಲು ಯಾರು ಅರ್ಹರು?

ಪಟ್ಟಣದಲ್ಲಿ ವಾರ್ಷಿಕ ವರಮಾನ 23,124ರೂ. ಗಳಿಗಿಂತ ಕಡಿಮೆ ಇರುವ ಎಲ್ಲ ಕುಟುಂಬಗಳೂ ಈ ಯೋಜನೆಯ ಸವಲತ್ತು ಪಡೆಯಲು ಅರ್ಹವಾಗಿವೆ.

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯನ್ನು ಯಾರು ಜಾರಿಗೊಳಿಸುತ್ತಾರೆ?

ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಯೋಜನೆಯು ಪೌರಾಡಳಿತ ನಿರ್ದೇಶನಾಲಯಕ್ಕೆ ಒಳಪಟ್ಟಿದೆ. ರಾಜ್ಯದ 215 ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ಈ ಯೋಜನೆಯಲ್ಲಿ ಸಹಾಯ ಪಡೆಯಲು ಯಾರನ್ನು ಸಂಪರ್ಕಿಸಬೇಕು?

ಪ್ರತಿಯೊಂದು ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿ ಕಾರ್ಯಾಲಯದಲ್ಲಿ ಸರ್ಕಾರ ನೇಮಿಸಿರುವ ಯೋಜನಾಧಿಕಾರಿಯನ್ನಾಗಲೀ 'ಸಮುದಾಯ ಸಂಘಟಕ'ರನ್ನಾಗಲೀ ಸಂಪರ್ಕಿಸಬಹುದು.

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯ ಸೌಲಭ್ಯ ಪಡೆಯಿರಿ.

ಕುಟುಂಬದ ಆದಾಯ ಹೆಚ್ಚಿಸಿರಿ.

ಕರ್ನಾಟಕ ವಾರ್ತೆ

ಪ್ರಕಟಣೆ: ನಿರ್ದೇಶಕರು, ವಾರ್ತಾ ಇಲಾಖೆ ಇನ್‌ಫೆಂಟ್ರಿ ರಸ್ತೆ, ಬೆಂಗಳೂರು

ಮಡಿ ಹೆಂಗಸು

ನಾಲ್ಕು ದಶಕಗಳಿಗೂ ಹಿಂದಿನ ಮಾತು. ನಮ್ಮ ಮನೆಯ ಅಡಿಗೆ ವೆಂಕಮ್ಮನವರು ಬಾಲವಿಧವೆಯಾಗಿ, ಆ ಸಣ್ಣ ವಯಸ್ಸಿನಲ್ಲೇ ಮಡಿ ಹೆಂಗಸೆನಿಸಿಕೊಂಡು ಏಳಕ್ಕೂ ಹೆಚ್ಚಿನ ದಶಕಗಳನ್ನು ಹಿರಿಯರು ಆರೆದು ಹುಯ್ದಿದ್ದ ಮಡಿ ಆಚಾರದಲ್ಲೇ ಅಡಿಗೆ ಮನೆಯ ಪ್ರಪಂಚದಲ್ಲೇ ಜೀವನವನ್ನು ಕಳೆದಂತವರು.

ಆಗ ಹುಡುಗಿಯಾಗಿದ್ದ ನಾನು, ಅವರ ಆ ಆಚಾರ-ವಿಚಾರ ಮಡಿ-ಸಂಪ್ರದಾಯದ ಬಗ್ಗೆ ಆಕ್ರೋಶ, ಅಸಹನೆ, ಅಸಮಾನದಿಂದ ಸಿಡಿಮಿಡಿಗೊಳ್ಳುತ್ತಿದ್ದೆ. ಆದರೆ ಅವರ ಬಗ್ಗೆ ಅನುಕಂಪದಿಂದ ಆ ಬಗ್ಗೆ ಅವರೊಡನೆ ತರ್ಕಕ್ಕೆ ಇಳಿಯುತ್ತಿದ್ದೆ. "ಏನು ಮಾಡೋದು ಹುಡುಗಿ? ನಿನಗಿದೆಲ್ಲಾ ಅರ್ಥವಾಗೋದಿಲ್ಲ. ಚಿಕ್ಕಂದಿನಿಂದ ಬಂದದ್ದು ಹಿರಿಯರು ಕಲಿಸಿದ್ದು ಈಗ ಬದಲಾಗಲು ಸಾಧ್ಯವಾ?" ಎನ್ನುತ್ತಿದ್ದರು.

ಅಂದ್ಹಾಗೆ ಅವರಿಗಾಗಿ ನಿತ್ಯ ಉಡಲು ಅಂಗಡಿಯಿಂದ 2 ಸೀರೆಗಳನ್ನು ತರಬೇಕಾಗಿತ್ತು. ವರ್ಷಕ್ಕೊಂದು ಬಾರಿ ನಾನು ಕೇಳಿದೆ "ಯಾವ ಬಣ್ಣದ್ದು ಅಂಚು, ಸೆರಗು ಹೇಗಿರಬೇಕು? ಇತ್ಯಾದಿ. ವೆಂಕಮ್ಮ ಹೇಳಿದರು "ಮಡಿ ಸೀರೇಂತ ಕೇಳಮ್ಮ, ಕೆಂಪು ಬಿಟ್ಟು ಇನ್ನು ಯಾವ ಬಣ್ಣಾನೂ ಅವರು ತೋರಿಸೋದಿಲ್ಲ ಹೂ, ಅಂದ್ಹಾಗೆ ಮರೆತೆ, ಅಂಚಿನಲ್ಲಾಗಲೀ, ಸೆರಗಿನಲ್ಲಾಗಲೀ, ಒಂದೆಳೆಯೂ ಹಸಿರು ಬಣ್ಣದ್ದು ಇರಬಾರದು." ನನಗೂ ಈ ವೈಧವ್ಯವು, ಶಾಸ್ತ್ರ ಒಂದೂ ತಿಳಿದೇ ಇರಲಿಲ್ಲ. ವೆಂಕಮ್ಮನಂತಹವರು ಹಸಿರನ್ನೇ ಕಾಣಬಾರದೆಂದರೆ ನನಗ್ಯಾಕೋ ಅತಿರೇಕವೆನಿಸಿತು. ಅವರೆಂದೂ ಮುಂದಿನ ಬಾಗಿಲಿನಲ್ಲಿ ನಿಂತವರೇ ಅಲ್ಲ. ಅಡಿಗೆ ಮನೆ ಹಿಂದಿನ ಬಾಗಿಲಿನಷ್ಟೇ ಅವರ ಓಡಾಟ. ಮುಂದಿನಿಂದ ಮನೆ ಪ್ರವೇಶಿಸಿದವರಿಗೆ ಇವರ ದರ್ಶನವಾಗಬಾರದಲ್ಲ.

ಸರಿ, ಅಂಗಡಿಗೆ ಹೋಗಿ ಕೆಂಪು ಸೀರೆಗಳನ್ನು ತೆಗೆಸಿದೆ. ಆಯ್ಕೆಯೇ ಇಲ್ಲವಲ್ಲ, ಹಸಿರು ದಾರ ಇರಬಾದಷ್ಟೆ. ಅದಕ್ಕಾಗಿ ಸೀರೆಗಳನ್ನು ಪರೀಕ್ಷಿಸಿ ಬೆಲೆಯನ್ನು ಚೌಕಾಸಿ ಮಾಡಿದೆ. ಅಂಗಡಿಯವರಿಗೆ ಹೇಳಿದೆ. "ಮುಂದೆ ಇನ್ನಾರೂ ಇಂತ ಸೀರೇನ ತೊಗೋಳೊದೂ ಇಲ್ಲ, ಉಡೋದೂ ಇಲ್ಲ, ಈಗ ಈ ಸೀರೆಗಳನ್ನು ಕಮ್ಮಿ ಬೆಲೆಗೆ ಕೊಟ್ಬಿಡಿ, ಇಲ್ಲದಿದ್ದರೆ ನಿಮ್ಮಲ್ಲೇ ಉಳಿದು ಹೋಗುತ್ತೆ" ಅಂತ ಅಂಗಡಿಯವನು ನಕ್ಕು ಸೀರೆಗಳನ್ನು ಪೇಪರಿನಲ್ಲಿ ಸುತ್ತಿಕೊಟ್ಟ. ವೆಂಕಮ್ಮನವರು ಹಿಂದಿನ ಹಳೆ ಸೀರೆಗಳನ್ನು ಹಾಸಲು-ಹೊದೆಯಲು ಉಪಯೋಗಿ ಸುತ್ತಿದ್ದರು. ಹೊಸ ಸೀರೆಗಳನ್ನು ಒಗೆದೇ ಉಡುತಿದ್ದದ್ದು. ಈ ವೆಂಕಮ್ಮನಂಥ ವಿಧವೆಯರು, ಇನ್ನೊಬ್ಬರಿಗಾಗಿ ರುಚಿ-ರುಚಿಯಾದ ಭೋಜನ-ಭಕ್ಷ್ಯ ತಯಾರಿಸಿ ತಾವು ಮಾತ್ರ ಒಪ್ಪತ್ತುಂಡು ಏಕವಸ್ತ್ರಧಾರಿಣಿಯರಾಗಿ, ಜಪ-ಪೂಜೆ ಯಲ್ಲಿ ತಮ್ಮನ್ನು ತೊಡಗಿಸಿಕೊಂಡು ನಿಜಕ್ಕೂ ಯಾವ ಯೋಗಿ ಮಹರ್ಷಿಗಳಿಗೂ ಕಡಿಮೆಯಾರಲಿಲ್ಲ.

ಅಂದು ಸೀರೆಗಳನ್ನು ಖರೀದಿಸಿದ ನಾನು ಇನ್ನು ಮುಂದೆ ಔಷಧಿಗೂ ವೆಂಕಮ್ಮನಂತ ಮಡಿ ಹೆಂಗಸರು (ಕೇಶ ಮುಂಡನ ಮಾಡಿಸಿಕೊಂಡ ವಿಧವೆ) ಸಿಗುವುದಿಲ್ಲವೆಂದುಕೊಂಡೆ. ನನ್ನ ಪರಿಸರದಲ್ಲಿ ಮುಂದೆ ಇಂತಹವರನ್ನು ನಾನು ಕಾಣಲೂ ಇಲ್ಲ. ಆದರೆ ಮಥುರಾ, ರಾಜಸ್ಥಾನ, ಕಾಶಿ ಇಲ್ಲಿ 40-50 ವರ್ಷಗಳ ಹಿಂದೆ ಈ ಅನಿಷ್ಟ ಪದ್ಧತಿಗೆ ಗುರಿಯಾದ ವಯಸ್ಸಾದ ಹಿಂದೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಈಗ ತಿಳಿದಿದೆ. ಈ ಪೀಠಿಕೆ ಯಾಕೇಂದ್ರೆ ಹೋದವರ್ಷ ನಾನು 5-6 ತಿಂಗಳು ಊರಿನಲ್ಲಿರಲಿಲ್ಲ, 6 ತಿಂಗಳ ನಂತರ ಬೆಂಗಳೂರಿಗೆ ಮರಳಿಗ ಮಾರನೆಯ ದಿನವೇ ನನ್ನನ್ನು ಕಂಡು ನಮ್ಮ ಎದುರ ಮನೆ ಸವಿತಾ ಓಡಿ ಬಂದಳು. "ನೋಡಿ, ನೀವು 6 ತಿಂಗಳಿಂದ ಊರಿನಲ್ಲಿರಲಿಲ್ಲ ಎಷ್ಟೊಂದು ಸಮಾಚಾರ ಇದೆಗೊತ್ತಾ ನಿಮಗೆ ಹೇಳೋದಕ್ಕೆ ಆದರಲ್ಲೂ ನೀವು ಉರಿದೇಳುವಂತ ಸಮಾಚಾರ ಈ ಬೀದೀಲಿ ನಡೆದದ್ದನ್ನ ನಿಮಗೆ ಹೇಳಲೇಬೇಕು", ಅಂತ ಬಂದೆ. "ಹಾಗಾದರೆ ಯಾರೋ ಮಹಿಳೆಗೆ ಬಹಳ ಅನ್ಯಾಯ ಆಗಿರ್ಬೇಕಲ್ವಾ?" "ಹೌದು ನೀವೇಸಾದ್ರು ಇದ್ದಿದ್ರೆ... ನಾವುಗಳು ನಿಮ್ಮನ್ನ ತುಂಬಾ ಜ್ಞಾಪಿಸಿಕೊಂಡ್ವಿ".

"ಸರಿ ನನ್ನನ್ನ ಜ್ಞಾಪಿಸಿಕೊಂಡ್ರಂತೆ. ಪ್ರಯೋಜನವೇನಾಯ್ತು? ಅದೇನು ಹೇಳು. ನಮ್ಮನೆ ಸಾಲಿನ ನಂತರ ಕ್ರಾಸ್ ಆದ ಮೇಲೆ ಹಿಂದಕ್ಕಾ 2 ಮನೆಗಳಿಲ್ವಾ? ಅಲ್ಲಿ ತುಳಸೀಬಾಯಿ ಅಂತ ಇಲ್ಲವಾ?.....

"ನಿನಗ್ಗಿಡು ಊರ್ನೋರೆಲ್ಲಾ ಪರಿಚಯ, ಅವರ ಮನೇಲಿ ತುಂಬಾ ಜನ ಇದಾರೆ, ಅವರಲ್ಲಿ ತುಳಸೀ ಬಾಯಿ ಯಾರೋ ನನಗೆ ಗೊತ್ತಿಲ್ಲ. ಆಕೆಗೇನಾಯ್ತು?" ಸವಿತಾ ಹೇಳಿದ್ದಿಷ್ಟು: ತುಳಸೀ ಬಾಯಿಗೆ ಹನ್ನೊಂದು ವರ್ಷಕ್ಕೇ ಮದುವೆ ಮಾಡಿದರು, 14ನೆಯ ವಯಸ್ಸಿಗೆ ಅತ್ತೆ ಮನೆಗೆ ಕಳಿಸಿಕೊಟ್ಟರು. ಅತ್ತೆ ಮನೆಯಲ್ಲಾಕೆ ಒಂದು ಹತ್ತು ವರ್ಷ ಜೀತದಾಳಾಗಿ ಗಂಡ ಎನಿಸಿಕೊಂಡವನು ಮುಖದರ್ಶನವೂ ಇಲ್ಲದೆ ದಿನಗಳನ್ನು ದೂಡಿದರು. ನಿದಾನವಾಗಿ ಈ ಬಗ್ಗೆ ತಿಳಿದ ಮೇಲೆ ತಾಯಿ ಮನೆಯವರು ಮಗಳನ್ನು ಮನೆಗೆ ಕರೆತಂದರು. ತಂಗಿ ತಮ್ಮಂದಿರ ಮದುವೆಗಳಾದವು. ಅವರಿಗೆ ಮಕ್ಕಳಾದವು. ತಂದೆ-ತಾಯಿ ಗತಿಸಿದರು. ಒಬ್ಬ ತಂಗಿಯ ಮನೆಯಲ್ಲೇ ಈಕೆ ಅವರ ಸಂಸಾರದಲ್ಲಿ ಒಬ್ಬರಾಗಿ ಅವಳ ಮಕ್ಕಳನ್ನೂ ಸಾಕಿ ಸಲುಹಿ ಅಲ್ಲೆ 3ಕ್ಕೂ ಹೆಚ್ಚು ದಶಕಗಳನ್ನು ಕಳೆದರು ಮೊನ್ನೆ ಇದ್ದಕ್ಕಿದ್ದ ಹಾಗೆ ಅತ್ತೆ

ಮನೆಯವರಿಂದ ಪತ್ರ ಬಂತಂತೆ ''ತುಳಸೀ ಬಾಯಿಯ ಗಂಡ ಹೋಗ್ಬಿಟ್ರು, ಆಕೆಯನ್ನು ಕರೆತನ್ನಿ'' ಎಂದು. ಈ 40 ವರ್ಷಗಳಲ್ಲಿ ಪತಿಯ ಮುಖದರ್ಶನವೇ ಇಲ್ಲದಿದ್ದರೂ ಆ ಹೆಣದ ದರ್ಶನ ಬೇಡವೇ? ಈ ಹಿಂದೂ ಮಹಿಳೆಗೆ. ಸರಿ ಈಕೆಯನ್ನು ಮನೆಯವರು ಕರೆದೊಯ್ದರು ಪತಿ ಇದ್ದ ಜಾಗಕ್ಕೆ. ಈಕೆಯನ್ನು ಇತ್ತೀಚೆಗೆ ಕಾಣದೆ, ಸವಿತಾ ಅವರ ಮನೆಗೆ ಹೋದಳು ಇವಳನ್ನು ನೋಡಿದ್ದೇ ತಡ ಆಕೆ ಸೆರಗಿನಿಂದ ಮುಖ ಮುಚ್ಚಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರಂತೆ.

ಆದದ್ದು ಇಷ್ಟು. ಗಂಡನ ಊರಿಗೆ ಹೋದ ಇವರನ್ನು ಅತ್ತೆ ಮನೆಯವರು ಸುಮ್ಮನೆ ಬಿಡಲಿಲ್ಲ. ಕೆಲವು ಪತ್ರಗಳಿಗೆ ಇವರ ಸಹಿ ಹಾಕಿಸಿಕೊಂಡು ಅಷ್ಟು ಸಾಲದೆಂಬಂತೆ ಸಾಕ್ಷಿಗಾಗಿ ಎಂಬಂತೆ ಆಪತಿಯ ಈ ಹೆಂಡತಿಗೆ ಕೇಶಮುಂಡನ ಮಾಡಿಸಿ ಕಳಿಸಿದರು.

ಹೆಣ್ಣುಮಕ್ಕಳಿಗೆ ಹೀಗಿರಿ-ಹಾಗಿರಿ ಎಂದು ಉಪದೇಶಿಸುತ್ತಿದ್ದ ಈ ತುಳಸೀ ಬಾಯಿ ಸವಿತಾಳನ್ನು ಕಂಡಾಗಲೆಲ್ಲಾ ''ನನ್ನಾಗೆ ನೀನೂ ಕೂಡ ಮದುವೆಯಾದರೂ ಕನ್ಯೆಯೇ, ವಿದ್ಯಾವಂತಳಾಗಿದ್ದೂ ಹೀಗ್ಯಾಕೆ? ಇನ್ನೊಂದು ಮದುವೆ ಮಾಡಿಕೋ'' ಎನ್ನುತ್ತಿದ್ದ ಈ ದಿಟ್ಟ ಹೆಂಗಸು ಅದು ಹೇಗೆ ಬಲಿಪಶುವಾದರು? ಆಕೆಯೇ ವಿವರಿಸಿದ ಆ ಅಸಹಾಯಕ ಪರಿಸ್ಥಿತಿ. ಆ ವಿಧಿ ವಿಧಾನಗಳನ್ನು ನೆನಸಿಕೊಂಡರೆ ಕಿಚ್ಚೇಳುತ್ತದೆ. ಆಕೆಯ ದುಃಖ ಕೋಪ ಹೇಳತೀರದು.

ಈಗ್ಗೆ 60 ವರ್ಷಗಳ ಹಿಂದೆ ತಮ್ಮ 11ನೇ ವಯಸ್ಸಿನಲ್ಲೇ ವಿಧವೆಯಾದ ನಮ್ಮಕ್ಕನ ಗೆಳತಿಯೊಬ್ಬರು ಯಾವುದೋ ಸಂದರ್ಭದಲ್ಲಿ ಹೇಳುತ್ತಿದ್ದರು. '' ಆ ಎಳೆ ವಯಸ್ಸಿನಲ್ಲಿ ಗಂಡ-ಮದುವೆ ಈ ವಿಚಾರ ಎಲ್ಲಾ ಮನಸ್ಸಿಗೆ ನಾಟೇ ಇರೋದಿಲ್ಲ. ನಿನ ಗಂಡ ಸತ್ನಲ್ಲೇ ಎಂದು ದೊಡ್ಡೋರು ಅತ್ತಾಗ ನಾವೂ ಅಳ್ತೇವೆ ಅಷ್ಟೆ, ಆದರೆ ಆ ಕೆಟ್ಟ ವಿಧಿ ವಿಧಾನಗಳು ಬಹಳ ಭಯಂಕರ ಆ ಎಳೆ ಮನಸ್ಸಿನ ಮೇಲೆ ಶಾಶ್ವತವಾಗಿ ಘಾಸಿಯನ್ನುಂಟು ಮಾಡುತ್ತವೆ. ಇಂದಿಗೂ, ನೆನಸಿಕೊಂಡರೆ ತಡೆದುಕೊಳ್ಳೋದಿಕ್ಕೆ ಆಗೋಲ್ಲ''. ಇನ್ನು ತುಳಸೀಬಾಯಿ - ಅತ್ತೆ ಮನೆಯವರು ಮಡಿಯಾಗಿ ಇರೆಂದು ಮಾಡಿದ್ದನ್ನು ಇವರೇನೂ ಮುಂದುವರಿಸಲಿಲ್ಲ. ಮೊದಲಿನ ಹಾಗೆ ಕೂದಲು ಬೆಳೆದಿದೆ. ಹಾಯಾಗಿ ಓಡಾಡಿಕೊಂಡಿದ್ದಾರೆ.

ಮನೆಯಲ್ಲಿ ಕೆಲವರು ''ನೀ ಮಾಡಿದ ಅಡಿಗೆಯನ್ನು ಊಟ ಮಾಡೋದಿಲ್ಲ'' ಎಂದರಂತೆ. ''ಪೀಡೆ ಕಳೀತು, ಅಡಿಗೆ ಕೆಲಸವೇ ತಪ್ಪಿತು'' ಎಂದು ತನಗೆ ಇಷ್ಟವಾದ ಕಸೂತಿ ಕೈ ತೋಟದ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡು ಆಕೆ ಆ ನೋವು-ಅವಮಾನ-ಕಿಚ್ಚನ್ನು ಮರೆಯಲೆತ್ನಿಸಿದ್ದಾರೆ. ಅಂತು 40 ವರ್ಷದ ಹಿಂದೆ ನಾನಂದುಕೊಂಡಿದ್ದು ಸುಳ್ಳಾಯಿತಲ್ಲಾ ಎಂದುಕೊಂಡೆ. ಈ ಅನಿಷ್ಟ ಪದ್ಧತಿ ಅಲ್ಲಿ-ಇಲ್ಲಿ ನುಸುಳುತ್ತಲೇ ಇದೆಯಲ್ಲಾ ಎನಿಸಿತು. ಹೀಗೆ ಇಂದೂ ಕೂಡ ಅಲ್ಲಲ್ಲಿ ಇಣುಕುತ್ತಿರುವ ಈ ಕ್ರೌರ್ಯ ಮತ್ತು ಆ ಮಹಿಳೆಯರ ನೋವು-ಕಷ್ಟಗಳನ್ನು ಹಿಂದಿನ ಘಟಶ್ರಾದ್ಧ, ಫಣಿಯಮ್ಮ ಚಿತ್ರಗಳಂತೆ, ತೆರೆಯ ಮೇಲೆ ಚಿತ್ರೀಕರಿಸಿದರೆ ಸಮಸ್ಯೆ ದೂರವಾಗಲಾರದೆನಿಸುತ್ತದೆ.

ಮತ್ತೊಂದು ಅಂಶವನ್ನಿಲ್ಲಿ ನಾವು ಗಮನಿಸಬೇಕು. ಈ ಕಾರ್ಯಕ್ಕೆ ಆಹುತಿಯಾಗುವವರು ಭಾರತದ ಜನಸಂಖ್ಯೆಯಲ್ಲಿ ಶೇ 2 ರಷ್ಟಿರುವ ಮೇಲು ಜಾತೀಯ ಕೆಲವು ಪಂಗಡಗಳ ಮಹಿಳೆಯರು ಮಾತ್ರ. ಅದರಲ್ಲೂ ಬಡಸಂಸಾರದ ಮಹಿಳೆಯರು ಈಗ ಇಂತವರ ಸಂಖ್ಯೆಯೂ ಇಳಿಮುಖವಾಗುತ್ತಿದೆ. ಇರುವವರಲ್ಲಿ 40 ವರ್ಷಕ್ಕೂ ಹಿಂದೆ ಈ ಪದ್ಧತಿಗೆ ಒಳಪಟ್ಟಂತ ವಯಸ್ಸಾದ ಬಡ-ಅನಾಥ ಮಹಿಳೆಯರು ಹೆಚ್ಚಾಗಿದ್ದಾರೆ. ಮಥುರಾ, ವೃಂದಾವನ, ಕಾಶಿ, ಈ ಪ್ರದೇಶಗಳಲ್ಲಿ ನಾವೂ ಅವರನ್ನು ಕಾಣಬಹುದು. ಈ ಕ್ರೌರ್ಯಕ್ಕೆ ತೆರೆ ಎಳೆಯಬೇಕಾದರೆ ತುಳಸೀಬಾಯಿ ಅಂತಹವರ ಮೂಲಕ ತಮ್ಮ ಆ ದೌರ್ಜನ್ಯಕ್ಕೆ ಕಾರಣವಾದವರಲ್ಲಿ ಒಂದಿಬ್ಬರನ್ನಾದರೂ ಕಾನೂನು ವ್ಯಾಪ್ತಿಗೆ ಒಳಪಡಿಸುವಂತಾಗಬೇಕು. ಗೋಣಾಡಿಸಿಯಾವುದೋ ನಂಬಿಕೆಯಿಂದ ಈ ಕ್ರೌರ್ಯವನ್ನು ಸ್ವೀಕರಿಸುವ ಜೀವನವಿಡೀ ನರಳುವ ಮಹಿಳೆಯರಲ್ಲಿ ಬದಲಾವಣೆ ತರಬೇಕು. ಇಲ್ಲಿ ಇನ್ನೊಂದು ಮಾತನ್ನು ಹೇಳಬೆಕಾಗಿದೆ. ಅನಕ್ಷರಸ್ತರೂ ಮತ್ತು ಜೊತೆಗೆ ಬಡವರು ಆದ ಅಂತಹ ವಿಧವಾ ಮಹಿಳೆಯರಿಗೆ ಜೀವನೋಪಾಯಕ್ಕೆ ಇದ್ದ ಏಕೈಕ ಮಾರ್ಗವೆಂದರೆ ಅಡಿಗೆಯವರಾಗಿ ಶ್ರೀಮಂತರ ಅಡಿಗೆ ಮನೆಯನ್ನು ಸೇರುವುದು. ಮಡಿವಂತ ಶ್ರೀಮಂತರಿಂದ ಬೇಡಿಕೆ ಇದ್ದದ್ದು (ಈಗಲೂ ಇರಬಹುದೇನೋ), ಮುತ್ತೈದೆ ಇಲ್ಲವೆ ಮಡಿ ಹೆಂಗಸರಿಗೆ ಮಾತ್ರ, ಸಕೇಶಿಯರಿಗಲ್ಲ. ಹೀಗಾಗಿ ವಿಧವಾ ಮಹಿಳೆಯರು ಮಡಿಹೆಂಗಸರಾಗಬೇಕಾಗುತ್ತಿತ್ತು.

ಈ ಪದ್ಧತಿ ನಶಿಸುತ್ತಿರುವಾಗ ಹಿಂದಿನದನ್ನು ಎತ್ತಿ ತೋರಿಸುವುದರಲ್ಲಿ ಅರ್ಥವಿಲ್ಲ. ಭಾರತದ ಕೆಲವೆಡೆಯಲ್ಲಿರುವ ಹಿಂದೆ ಈ ಪದ್ಧತಿಗೆ ಒಳಪಟ್ಟು ಹೀನ ಸ್ಥಿತಿಯಲ್ಲಿ ಬದುಕನ್ನು ಮಾಡುತ್ತಿರುವ ಆ (ವೃದ್ಧ) ವಿಧವೆಯರನ್ನು ಆ ಸ್ಥಿತಿಯಿಂದ ಹೊರತರಲು ಅವರಿಗೆ ನೆರವು ನೀಡಲು ಮಹಿಳಾ ಸಂಘಟನೆಗಳು ಶ್ರಮಿಸಬೇಕಾಗಿದೆ. ಈ ಪದ್ಧತಿಯನ್ನು ಬುಡಸಮೇತ ಕಿತ್ತೊಗೆಯಬೇಕಾದರೆ ಮನೆಮನೆಯಲ್ಲೂ ಪ್ರತಿ ಮಹಿಳೆಯ ಪ್ರತಿಭಟನೆ ಅತ್ಯಗತ್ಯ. ನಾನು, ನನ್ನಂತೆ ನನ್ನ ಕೆಲವು ಗೆಳತಿಯರು ನಮ್ಮ ಅಮ್ಮನ ತಂಟೆಗೆ ಯಾರೂ ಬರದಂತೆ ನೋಡಿಕೊಂಡೆವು. ಪ್ರತಿಭಟಿಸಲೂ ತಯಾರಿ ನಡೆಸಿದ್ದೆವು. ಮಹಿಳೆಯ ರಕ್ಷಣೆ ಮಹಿಳೆಯರಿಂದಲೇ ಆಗಬೇಕು.

ಪತ್ನಿಯರು ಮತ್ತು ಉಪಪತ್ನಿಯರು

ಬ್ರಿಟಿಷರ ಕಾಲದಲ್ಲಿದ್ದ ಭಾರತೀಯ ಸ್ಥಿತಿಗತಿಯ ಕುರಿತು ವಾಸ್ತವಕ್ಕೆ ಹತ್ತಿರವಾದ ಚಿತ್ರಣವನ್ನು ನೀಡುವುದರಲ್ಲಿ ಆ ಕಾಲಕ್ಕೆ ಭಾರತಕ್ಕೆ ಬಂದ ಬ್ರಿಟಿಷ್ ಕಲಾವಿದರೆ ಮೊದಲಿಗರು ಆದರೆ, ಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ, ಕಣ್ಣಾರೆ ಕಂಡ ಜನರ ದಾಖಲಾತಿಗಳ ಅಧ್ಯಯನ ಅಲಕ್ಷ್ಯಕ್ಕೆ ಒಳಗಾಗಿರುವ ಕ್ಷೇತ್ರವೇ ಆಗಿದೆ. ಇಂಥ ಕೊರತೆ ನೀಗಿಸುವ ಪ್ರಯತ್ನ Beyond the veil, Indian women inthe Raj (Pran Navile, Navile Books New Delhi, 2000, P. 141) ಕೃತಿಯಲ್ಲಿದೆ. ಈ ಕೃತಿಯಿಂದ ಆಯ್ದ ಇಲ್ಲಿನ ಕೆಲವು ಭಾಗಗಳು ಭಾರತೀಯ ಮಹಿಳೆಯರ ಬಗ್ಗೆ ಯೂರೋಪಿಯನ್ನರಿಗಿರುವ ಅಭಿಪ್ರಾಯಗಳ ಸಮೀಕ್ಷೆ ನಡೆಸುತ್ತದೆ. ಇದನ್ನು ಕನ್ನಡದಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ **ಶ್ರೀಮತಿ ಹೆಚ್.ಎನ್. ಗೀತಾ**

ಸಾಮ್ರಾಜ್ಯಶಾಹಿ ಸಂಸ್ಥೆಯಲ್ಲಿ ಪುರುಷರದ್ದೇ ಪೌರುಷ. ಹಿಂದೂಸ್ತಾನದ ಪರಕೀಯ ಕ್ಷೇತ್ರದಲ್ಲಿಯೂ ಕೆಲವು ವ್ಯಾಪಾರಿಗಳು ಹಾಗೂ ಸಾಹಸಿಗರು ತಮ್ಮ ಭಾವನಾತ್ಮಕ ಮತ್ತು ಲೈಂಗಿಕ ಶಕ್ತಿಗಳ ಹರಿವಿಗೆ ಮಾರ್ಗಗಳನ್ನು ಕಂಡುಕೊಂಡರು. ನೀತಿಬದ್ಧ ಬ್ರಿಟನ್ನಿನಲ್ಲಿ ಇವಕ್ಕೆಲ್ಲ ಅಡ್ಡಿ, ಪ್ರತಿರೋಧಗಳಿರುವುದರಿಂದ ಇಂತಹ ಆಸಕ್ತಿಗಳನ್ನೆಲ್ಲ ಮುಚ್ಚಿಡಬೇಕು, ಅದುಮಿಡಬೇಕು. ಏಕೆಂದರೆ ಬ್ರಿಟನ್ನಿನಲ್ಲಿ ಲೈಂಗಿಕತೆಯನ್ನು ಒಂದು ಶಾಪವೆಂದೇ ಪರಿಗಣಿಸಲಾಗುತ್ತಿತ್ತು. ಮೂಲ ಅಪರಾಧದಿಂದ ಉಂಟಾಗುವ ಒಂದು ಶಾಪ. ಅಲ್ಲಿ ಅನೈತಿಕ ಸಂಬಂಧಗಳಿಗೆ ಲೈಂಗಿಕ ಅಡ್ಡದಾರಿಗಳಿಗೆ ಸಿಗುತ್ತಿದ್ದ ಶಿಕ್ಷೆಯೂ ತೀವ್ರವಾದದ್ದಾಗಿತ್ತು.

ದೀರ್ಘವಾದ ಹಾಗೂ ಅಡ್ಡಾದಿಡ್ಡಿ ಪ್ರಯಾಣ ಒಡ್ಡುತ್ತಿದ್ದ ಅಪಾಯಗಳು ಧಿಮ್ಮೆಟ್ಟಿಸಿದ್ದರಿಂದ ಕೇವಲ ಕೆಲವೇ ಬ್ರಿಟಿಷ್ ಮಹಿಳೆಯರು ಭಾರತಕ್ಕೆ ಬರುವ ಸಾಹಸ ಮಾಡಿದರು. ಈಸ್ಟ್ ಇಂಡಿಯಾ ಕಂಪೆನಿಯ ಮೂಲ ಶಾಸನಾಧಿಕಾರಗಳು ಮಹಿಳೆಯರಿಗೆ ಯಾವುದೇ ಹುದ್ದೆ ಕೊಡುವುದನ್ನು ವಿರೋಧಿಸಿದ್ದವು. ಬ್ರಿಟಿಷರಿಗಿಂತ ಮುಂಚೆಯೇ ಇಲ್ಲಿ ಕಾಲೂರಿದ್ದ ಪೋರ್ಚುಗೀಸರು, ಗೋವಾದಲ್ಲಿದ್ದ ಪೋರ್ಚುಗೀಸ್ ಅಧಿಕಾರಿಗಳು ಮದುವೆಯಾಗಲೆಂದೇ ವರ್ಷ ವರ್ಷ ಮಹಿಳೆಯರ ತಂಡವನ್ನು ಭಾರತಕ್ಕೆ ಕಳಿಸುತ್ತಿತ್ತು. ಭಾರತದಲ್ಲಿ ನೆಲಸಿದ ಬ್ರಿಟಿಷರು ಮೊದ ಮೊದಲಿಗೆ ಪೋರ್ಚುಗೀಸ್ ಕಾಥೊಲಿಕರ ವಿಧವೆಯರನ್ನು ಹೆಣ್ಣು ಮಕ್ಕಳನ್ನು ಮದುವೆಯಾದರು. ಆದರೆ ಈಸ್ಟ್ ಇಂಡಿಯಾ ಕಂಪೆನಿಗೆ ಇದು ಸಮ್ಮತವಾಗಲಿಲ್ಲ. ಆದ್ದರಿಂದ 17ನೇ ಶತಮಾನದ ಕೊನೆಯಲ್ಲಿ ಕಂಪನಿಯು ಪೋರ್ಚುಗೀಸರ ಪದ್ಧತಿಯನ್ನೇ ಅನುಕರಿಸಿತು. ಭಾರತಕ್ಕೆ ತಂಡ ತಂಡವಾಗಿ ಬ್ರಿಟನ್ನಿನ ಯುವತಿಯರ ರವಾನೆಯಾಯಿತು. ಇವರನ್ನು ಕೂಡ 'ಸಂಭಾವಿತೆಯರು' ಹಾಗೂ 'ಭಾರತದ ಮದುವೆ ಮಾರುಕಟ್ಟೆಗೆ' ಎಂದು ವರ್ಗೀಕರಿಸಲಾಯಿತು. ಆದರೆ ಪತ್ನಿಯರಿಗಾಗಿ ಬೇಡಿಕೆ ಜಾಸ್ತಿಯೇ ಇತ್ತು; ಪೂರೈಕೆ ಕಡಿಮೆ ಇತ್ತು. ಈ ಯುವತಿಯರ ಪೈಕಿ ಕೆಲವರು ವೇಶ್ಯಾವೃತ್ತಿಗೆ ಇಳಿದರು. ಮದುವೆಗಿಂತ ಈ ವೃತ್ತಿಯೇ ಅವರಿಗೆ ಲಾಭದಾಯಕವಾಗಿ ತೋರಿತ್ತು. ಅವರ ಈ ಕಳಂಕ ಪೂರಿತ ನಡವಳಿಕೆಯನ್ನು ಕಂಡು ಕಂಪನಿಯ ಕಣ್ಣು ಕೆಂಪಗಾಯಿತು. ಮಾನಮರ್ಯಾದೆಗಳಿಂದ ಇರಿ, ಇಲ್ಲವಾದರೆ ಬ್ರೆಡ್ಡು ನೀರು ಕೊಟ್ಟು ಮನೆಗೆ ಸಾಗಹಾಕುತ್ತೇವೆ ಎಂದು ಕಂಪನಿ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿತು. ಪತ್ನಿಯರನ್ನು ಹುಡುಕಿಕೊಳ್ಳುವ ಹೊಣೆಯನ್ನು ನೌಕರರಿಗೇ ಬಿಟ್ಟು ಕೊಟ್ಟ ಕಂಪನಿ 18ನೇ ಶತಮಾನದಲ್ಲಿ ಮಹಿಳೆಯರನ್ನು ಆಮದು ಮಾಡಿಕೊಳ್ಳುವ ಪ್ರಯೋಗವನ್ನು ಕೈಬಿಟ್ಟಿತು.

18ನೇ ಶತಮಾನದ ಅಂತ್ಯದಲ್ಲಿ ಕಲ್ಕತ್ತೆಯಲ್ಲಿ ಕೇವಲ 250 ಮಂದಿ ಯೂರೋಪಿಯನ್ ಮಹಿಳೆಯರಿದ್ದರು. ಆದರೆ ಪುರುಷರ ಸಂಖ್ಯೆ ಮಾತ್ರ 4000. ಇಂಥ ಪರಿಸ್ಥಿತಿಯಲ್ಲಿ ಕಂಪನಿಯು ಅಲ್ಲಿದ್ದ ಬ್ರಿಟಿಷ್ ಪ್ರಜೆಗಳು ಹಾಗೂ ಸೈನಿಕರು ಸ್ಥಳಿಯ ಮಹಿಳೆಯರನ್ನೇ ಪತ್ನಿಯನ್ನಾಗಿ, ಉಪಪತ್ನಿಯರನ್ನಾಗಿ ಸ್ವೀಕರಿಸುವಂತೆ ಪ್ರೋತ್ಸಾಹ ನೀಡಿತು; ಅವರಿಗೆ ಇದಕ್ಕಾಗಿ ಸಹಾಯ ಧನವನ್ನೂ ನೀಡಿತು, 'ಜನಾನ'ಗಳನ್ನು ಕಟ್ಟುವುದು ಅಥವಾ ಭಾರತೀಯ 'ಬೀಬಿ'ಯರನ್ನಿಟ್ಟುಕೊಳ್ಳುವುದು 'ಸಾಹೇಬ'ರುಗಳಿಗೆ ಒಂದು ಸಾಮಾನ್ಯ ಅಭ್ಯಾಸವಾಗಿ ಹೋಯಿತು. ಬೀಬೀ ಎಂದರೆ ಒಂದು ಸಣ್ಣ ಮನೆಯ ವ್ಯವಸ್ಥೆ ಮಾಡಿ, ಅದನ್ನು ತೂಗಿಸಬಲ್ಲ ಒಬ್ಬ ಇಂಗ್ಲೀಷಿನವನ ಉಪಪತ್ನಿ ಆಗಿದ್ದಿರಬಹದು, ಕಾನೂನುಬದ್ಧ ಪತ್ನಿಯೇ ಆಗಿದ್ದಿರಬಹುದು ಅಥವಾ ಆತನ ದೀರ್ಘಾವಧಿ ಸಂಗಾತಿಯೂ ಆಗಿದ್ದಿರಬಹದು. ಕೆಲವೊಮ್ಮೆ ಅವರು ಮದುವೆಯಾಗುತ್ತಿದ್ದೂ ಉಂಟು. ಆದರೆ ಕ್ರೈಸ್ತ ಹಾಗೂ ವಿಗ್ರಹಾರಾಧಕ ಪಂಗಡಗಳ ನಡುವೆ ಮದುವೆಗೆ ಪರಿಹರಿಸಲಾಗದಂಥ ಅಡ್ಡಿಗಳಿರುತ್ತಿದ್ದವು.

ಡಾ। ಜಾನ್ ಶಾರ್ಟ್ ಒಬ್ಬ ಕಂಪನಿ ಸರ್ಜನ್. 19ನೇಯ ಶತಮಾನದ ಕೊನೆಯ ಅರ್ಧಭಾಗದಲ್ಲಿ ಮದ್ರಾಸಿನಲ್ಲಿದ್ದ ಈತ

ತೆಲುಗು ಯುವತಿಯರ ಸೊಬಗು ಸೌಂದರ್ಯಗಳಿಗೆ ಮನಸೋತ. 'ನನ್ನ ವೃತ್ತಿ ಜೀವನದಲ್ಲಿ ಯೂರೋಪಿಯನ್ ಅಧಿಕಾರಿಗಳ ಉಪಪತ್ನಿಯರಾಗಿರುವ ಅನೇಕ ಮಂದಿ ತೆಲುಗು ಯುವತಿಯರನ್ನು ಕಂಡಿದ್ದೇವೆ. ಗಟ್ಟಿ ಮಹಿಳೆಯರ ನಡವಳಿಕೆಯನ್ನು ಹೋಲುವ ಅವರ ಸೌಮ್ಯ, ಸಭ್ಯ, ಶಿಷ್ಟಾಚಾರಗಳನ್ನು ಕಂಡು ನನಗೆ ಬಹಳ ಆಶ್ಚರ್ಯವಾಗಿದೆ' ಎಂದು ಆತ ದಾಖಲಿಸಿದ್ದಾನೆ. ಸುಂದರಿಯಾದ ಮುಸ್ಲಿಂ ಮಹಿಳೆಯೊಬ್ಬಳನ್ನು ಹೊಂದಲು ಹಾತೊರೆದಿದ್ದ ಸೇನೆಯ ಒಬ್ಬ ಕರ್ನಲನಂತೂ ಆಕೆ ಆತನ 'ಬೀಬೀ'ಯಾಗಲು ವಿಧಿಸಿದ್ದ ಶರತ್ತಿನಂತೆ ಬಿಸಿಲ ಬೇಗೆಯಲ್ಲಿ ತಮ್ಮನ್ನು ತಾವು ತಂಪಾಗಿರಿಸಿಕೊಳ್ಳಲು ಭಾರತೀಯ ಮಹಿಳೆಯರೊಟ್ಟಿಗೆ ಮಲಗಬೇಕೆಂದು 1783ರಲ್ಲಿ ಸ್ಥಳೀಯ ಪತ್ರಿಕೆಯೊಂದರ ಇಂಗ್ಲೀಷ್ ಸಂಪಾದಕನೊಬ್ಬ ಸಾಹೇಬರುಗಳಿಗೆ ಸಲಹೆ ಕೊಟ್ಟಿದ್ದು ರಂಜನೀಯ ವಿಷಯ. ವಾಸ್ತವದಲ್ಲಿ ಪೋರ್ಚುಗೀಸರು ಈ ಮೆಕ್ಕಲುಭೂಮಿಯ ಧಗೆಯಿಂದ ತಮ್ಮನ್ನು ರಕ್ಷಿಸಿಕೊಲು ಬಂಗಾಳೀ ಮಹಿಳೆಯರನ್ನು ಇಟ್ಟುಕೊಳ್ಳುವಂತೆ ಮುಗಲ್ ಚಕ್ರವರ್ತಿ ಷಹಜಹಾನ್‌ನಿಂದ ಫರ್ಮಾನ್ ಪಡೆದಿದ್ದರು.

ಈ ಪತ್ನಿ ಹಾಗೂ ಉಪಪತ್ನಿಯರ ಔಚಿತ್ಯ ಶೃಂಗಾರ ವಿಲಾಸಗಳಿಗೆ ಮಾತ್ರ ಸಂಬಂಧಿಸಿದ್ದಾಗಿರಲಿಲ್ಲ. ಈ 'ನಿದ್ರಾ ನಿಘಂಟುಗಳು' ಯೂರೋಪಿಯನ್ ಸಾಹೇಬರು ಭಾರತದ ಭಾಷೆ, ಜೀವನಶೈಲಿ, ಆಚಾರ-ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿದರು. ತನ್ನ ಆಶ್ರಯದಾತನ/ರಕ್ಷಕನ ಹಿತಾಸಕ್ತಿಗಳಲ್ಲಿ 'ಬೀಬೀ' ತನ್ನನ್ನು ತಾನು ಗುರುತಿಸಿಕೊಂಡಳು. ಮನೆಯ ಸಮಸ್ತ ಜವಾಬ್ದಾರಿ ವಹಿಸಿಕೊಂಡು, ದಕ್ಷತೆಯಿಂದ ನಿರ್ವಹಿಸಿದಳು. ಸಾಹೇಬ ಅನಾರೋಗ್ಯ ಪೀಡಿತನಾದಾಗ, ಕರ್ತವ್ಯಪ್ರಜ್ಞ ದಾದಿಯಾದಳು. ಈ ಸಂಬಂಧಗಳಲ್ಲಿ, ಬಾಂಧವ್ಯಗಳಲ್ಲಿ ಯಾವುದೇ ಕಶ್ಮಲವಿರಲಿಲ್ಲ, ಕಳಂಕವಿರಲಿಲ್ಲ, ಕೆಲವೊಮ್ಮೆ ಅವರ ಪರಸ್ಪರ ತೋರುತ್ತಿದ್ದ ಪ್ರೀತಿಗೌರವಗಳು ಮನೋಜ್ಞವಾಗಿದ್ದವು ಸಮಾಜದಲ್ಲಿ ಸಾಹೇಬನ ಪತ್ನಿಗೆ ಅಪಾರ ಗೌರವವಿತ್ತು. ಎಮ್ಮಾ ರಾಬರ್ಟ್ಸ್ ಬರೆದಿರುವ ಪ್ರಕಾರ- "ಭಾರತೀಯ ಮಹಿಳೆಯರು ಅವರು ಮುಸಲ್ಮಾನರೇ ಇರಬಹುದು, ಹಿಂದೂವೇ ಆಗಿರಬಹುದು ಇಂಗ್ಲೀಷಿನವರ ಸೊತ್ತಾದಾಗ ತಮ್ಮ ಆಚಾರ-ಪದ್ಧತಿಗಳಿಗೆ ಅನುಗುಣವಾಗಿ ತಮ್ಮ ಮದುವೆಯೇ ನಡೆದಿದೆಯೇನೋ ಎಂಬಂತೆ ಅತ್ಯಂತ ಅನನ್ಯಭಾವದಿಂದ ತಮ್ಮ ಆಶ್ರಯದಾತರ 'ಜನಾನಾ'ಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಾರೆ. ಉಚ್ಚಸ್ತ್ರೀಯಂತೆ ವ್ಯವಹರಿಸುವ ಅವರು ಮನೆಯಾಚೆಗೆ ಕಾಲಿಡುವುದೂ ಇಲ್ಲ". ಮುಖ್ಯ ಗೃಹದಿಂದ ಪ್ರತ್ಯೇಕವಾಗಿ ಆವರಣದ ಒಂದು ಮೂಲೆಯಲ್ಲಿರುತ್ತಿದ್ದ 'ಬೀಬೀಖಾನಾ' ಅಥವಾ 'ಲೇಡೀಹೌಸ್' ಅನೇಕ ಯೂರೋಪಿಯನ್ ಬಂಗಲೆಗಳ ಒಂದು ವಾಡಿಕೆ ವೈಶಿಷ್ಟ್ಯವಾಗಿತ್ತು.

ಈ ಸಂಬಂಧಗಳೆಂದರೆ ನಾಚಿಕೆಯಾಗಲಿ, ಅವಮಾನವಾಗಲೀ ಆಗುತ್ತಿರಲಿಲ್ಲ. ಗವರ್ನರ್ ಜನರಲ್ ಸರ್ ಜಾನ್ ಶೋರ್, ಮುಂಬಯಿಯ ಗವರ್ನರ್ ಮತ್ತು ಆತನ ಕೌನ್ಸಿಲ್‌ನ ಸದಸ್ಯರು ಸ್ಥಳೀಯ ಮಹಿಳೆಯರನ್ನು ತಮ್ಮ ಉಪಪತ್ನಿಯರನ್ನಾಗಿ ಬಹಿರಂಗವಾಗಿಯೇ ಸ್ವೀಕರಿಸಿದ್ದರು. ಈ ಅವ್ಯವಹಾರಗಳು ಯಾವುದೇ ಆಕ್ಷೇಪಣೆಗೂ ಒಳಗಾಗುತ್ತಿರಲಿಲ್ಲ. ಅವು ಗೌಪ್ಯವಾಗಿ ಉಳಿಯುತ್ತಿದ್ದರೂ ಅಪರೂಪವೇ. 'ಕ್ವೀ ಹೈ'ಗೆ ಮಗ ಹುಟ್ಟಿದ್ದನ್ನು ಸಾರುವ 'ದಿ ಗ್ರ್ಯಾಂಡ್ ಮಾಸ್ಟರ್' ಎಂಬ ವಿಡಂಬನಾತ್ಮಕ ಪದ್ಯದಲ್ಲಿ ಇದು ವಿದಿತ.

ತಮ್ಮ ದೊರೆಗಳನ್ನು ಪ್ರೀತಿಸುವ ಮಾರ್ಗದಲ್ಲೇ
ಬಡಪಾಯಿ ಗುಲಾಬನೂ ಸಾಗಿದ್ದ
ಒಂದೇ ವಾರದಲ್ಲಿ, ಕ್ವೀ ಹೈನ ಸಂತೋಷಕ್ಕೆ ಎಣೆಯಿಲ್ಲದಂತೆ
ನಮ್ಮ ಹುಡುಗನಿಗೊಂದು ಒಳ್ಳೆಯ ಗಂಡುಕೂಸು
ಹುಟ್ಟಿತು.
ಯಾವುದೇ ಕೃತ್ರಿಮವಿಲ್ಲದ ನಮ್ಮ ನಾಯಕ
ಈ ಮಹತ್ತರ ಪರಿಣಾಮದಿಂದ ಬೀಗಿದ
ಆತನಿಗೆ ಕೂಸೊಂದು ಹುಟ್ಟಿತ್ತಲ್ಲ
ಅಚ್ಚರಿಯೆಂದರೆ ಆತನಿಗೆ ಗೊತ್ತಿತ್ತು
ಕೂಸು ಖೊಟ್ಟಿಯಲ್ಲ ಎಂದು
ಏಕೆಂದರೆ ಕ್ವೀ ಹೈ ತನ್ನ ಭಾರತೀಯ ವಧುವಿಗೆ
ಕಟ್ಟಿರಲಿಲ್ಲ ತಾಳಿಯನ್ನೇನೂ
ಆದರೆ ಆತನಿಗೆ ವಿಶ್ವಾಸವಿತ್ತು
ಅವಳು ನಿಷ್ಠಾವಂತಳೇ ಆಗಿದ್ದಳೆಂದು.

ಕಲ್ಕತ್ತಾ ನಗರದ ಸ್ಥಾಪಕ ಜಾಬ್ ಚರ್ನೋಕ್‌ನದು ಒಂದು ಅಪೂರ್ವ ಪ್ರಕರಣ. ತನ್ನ ಪತಿಯ ದೇಹದೊಡನೆ ಚಿತೆ ಏರಿ ಸಹಗಮಾನ ಮಾಡಲಿದ್ದ ಸುಂದರ ಬ್ರಾಹ್ಮಣ ಯುವತಿ ಲೀಲಾಳನ್ನು 'ಸತಿ'ಯಾಗುವುದರಿಂದ ಆತ ಪಾರು ಮಾಡಿ ತಾನೇ ಅವಳನ್ನು ಮದುವೆಯಾದ. ಆತ 'ಅವಳಲ್ಲಿ ಗಾಢವಾಗಿ ಅನುರಕ್ತನಾಗಿದ್ದನೆಂದೂ ಒಬ್ಬ ಹಿಂದೂವಿನಂತೆಯೇ ಜೀವನ ನಡೆಸಲು ಅವಳು ಆ 'ಸಾಹೇಬ'ನ ಮನ ಒಲಿಸಿದ್ದಳೆಂದು ಹೇಳುತ್ತಾರೆ. ರಾಜಮಂದ್ರಿಯ ಒಬ್ಬ ಸುಂದರಿ ಬ್ರಾಹ್ಮಣ ಯುವ

ವಿಧವೆಯನ್ನು ಇಂಗ್ಲೀಷ್ ಸೇನಾಧಿಕಾರಿಯೊಬ್ಬ ಕಾಪಾಡಿ ಪತ್ನಿಯನ್ನಾಗಿ ಮಾಡಿಕೊಂಡ ಪ್ರಣಯ ಸಾಹಸಗಳ ಕತೆಯೂ ಇದೆ. ಕಂಪನಿಯಲ್ಲಿ ಫ್ರಾನ್ಸಿಸ್ ಡೇ ಎಂಬ ಮತ್ತೊಬ್ಬ ಉನ್ನತ ಅಧಿಕಾರಿಯದ್ದ. 1639ರಲ್ಲಿ ಮದ್ರಾಸಿನಲ್ಲಿ ಕೋಟೆ ಕಟ್ಟುವ ಸಲುವಾಗಿ ತನ್ನ ಪತ್ನಿಯ ಸ್ಥಳಕ್ಕೆ ಹತ್ತಿರದಲ್ಲೇ ನಿವೇಶನವನ್ನು ಆಯ್ಕೆ ಮಾಡುವ ಮೂಲಕ ಅವಳ ಬಗ್ಗೆ ಇದ್ದ ತನ್ನ ಆಳವಾದ ಬಲವನ್ನು ನಿರೂಪಿಸಿದ. ಸಾಹೇಬ ಮತ್ತು ಆತನ ಭಾರತೀಯ ಪತ್ನಿಯ ನಡುವೆ ಇದ್ದ ಸಾಮೀಪ್ಯ, ಆತ್ಮೀಯತೆಗಳನ್ನು ಸಮಕಾಲೀನ ಚಿತ್ರಕಲೆ ಬಿಂಬಿಸುತ್ತದೆ. 1780-90ರಲ್ಲಿ ವಿಲಿಯಂ ಹಿಕೇ ಎಂಬ ಕಲ್ಕತ್ತೆಯ ಗಣ್ಯ ವಕೀಲ ತನ್ನ ಪತ್ನಿ ಜೆಮ್‌ದಾನೀ ಬಗ್ಗೆ ಇದ್ದ ಪ್ರೀತಿಯ ಬಗ್ಗೆ ಮನೋಜ್ಞವಾಗಿ ಬರೆದಿದ್ದಾನೆ. ಇದೇ ಸುಂದರಿ ಮಹಿಳೆಯನ್ನು ಬ್ರಿಟಿಷ್ ಕಲಾಕಾರ ಥಾಮಸ್ ಹಿಕೇ ತನ್ನ ಅನುಪಮ ಕಲಾಕೃತಿಯಲ್ಲಿ ಮೂಡಿಸಿದ್ದಾರೆ. ವಿಲಿಯಂ ಹಿಕೇ ಬರೆಯುತ್ತಾರೆ- ಜೆಮ್‌ದಾನೀ ನನ್ನೊಂದಿಗಿದ್ದಳು. ಅವಳ ಅಪ್ರತಿಮ ಉಲ್ಲಾಸ-ಹಾಸ್ಯ ಮನೋಭಾವಗಳಿಂದ ನನ್ನ ಗೆಳೆಯರೆಲ್ಲ ಅವಳನ್ನು ಗೌರವಿಸುತ್ತಿದ್ದರು, ಪ್ರಶಂಸಿಸುತ್ತಿದ್ದರು. ಆಕೆ ಏಷ್ಯಾದ ಇತರ ಮಹಿಳೆಯರಂತೆ ಇರಲಿಲ್ಲ, ಅಪರಿಚಿತರನ್ನು ಕಂಡೊಡನೆ ದೂರ ಸರಿಯುತ್ತಿರಲಿಲ್ಲ. ಬದಲಿಗೆ ಪುರುಷರ ಪಾರ್ಟಿಗಳಲ್ಲಿ ಭಾಗವಹಿಸುತ್ತಿದ್ದಳು. ವೈನ್ ಮುಂತಾದ ಮಾದಕ ಪದಾರ್ಥಗಳನ್ನು ಸೇವಿಸದಿದ್ದರೂ, ಪಾರ್ಟಿಗಳಲ್ಲಿ ಉಲ್ಲಾಸದಿಂದ, ಸೌಹಾರ್ದದಿಂದ ಬೆರೆಯುತ್ತಿದ್ದಳು.'' ಆಕೆಯನ್ನು ಮತ್ತೂ ಶ್ಲಾಘಿಸುತ್ತ ''ಯಾವುದೇ ಪುರುಷ ಇಂಥ ಹೆಣ್ಣು ಸಿಗುವುದು ತನ್ನ ಸೌಭಾಗ್ಯ ಎನ್ನಬಹುದಾದಂಥ ಪ್ರೇಮ ವಾತ್ಸಲ್ಯ ತುಂಬಿದ್ದ ಸೌಮ್ಯ ಹೆಣ್ಣು'' ಎನ್ನುತ್ತಾರೆ. ಜೆಮ್‌ದಾನೀ ಹಿಕೇಯ ಮಿತ್ರ ಬಳಗದಲ್ಲೂ ಜನಪ್ರಿಯಳಾಗಿದ್ದವಳು. ಅವರೆಲ್ಲ ಆಕೆಗೆ ಉಡುಗೊರೆಗಳನ್ನು ಪ್ರೀತಿ ಸಂದೇಶಗಳನ್ನು ಕಳಿಸುತ್ತಿದ್ದರು. ಅವರ ಪೈಕಿ ಬಾಬ್ ಪಾಟ್ ಮತ್ತು ಕರ್ನಲ್ ಕೂಪರ್‌ರವರ ಪತ್ನಿಯರು ಕೂಡ ಅತ್ಯಂತ ಪ್ರೀತಿ ವಿಶ್ವಾಸ ಉಳ್ಳವರೇ ಆಗಿದ್ದರು. ಭಾರತೀಯ ಪತ್ನಿಯರನ್ನು ಹೊಂದಿದ್ದ ಇನ್ನೊಬ್ಬ ಪ್ರಮುಖ ವ್ಯಕ್ತಿಯೆಂದರೆ ಜನರಲ್ ವಿಲಿಯಂ ಪಾಮರ್. ದೆಹಲಿ ರಾಜಮನೆತನಕ್ಕೆ ಸೇರಿದ್ದ ಶ್ರೀಮಂತ ಮುಸಲ್ಮಾನ ಮಹಿಳೆ ಬೇಗಂ ಫೈಜ್ ಖಿಷ್ ಜೊತೆ ಆತ ವಾಸಿಸುತ್ತಿದ್ದ. ಅವಧ್‌ನ ರಾಜಕುಮಾರಿ ಆತನ ಎರಡನೆಯ ಪತ್ನಿಯಾಗಿದ್ದಳು. ತನ್ನ ಉಯಿಲಿನಲ್ಲಿ ಮನೆಯನ್ನು ಬೇಗಂ ಖಿಷ್ ಹೆಸರಿಗೆ ಬರೆದ ಪಾಮರ್ ಅವಳ ಕುರಿತು ''35 ವರ್ಷಗಳಿಗೂ ಮೀರಿ (1781-16) ಪ್ರೇಮಮಯಿ ಸಂಗಾತಿ-ಸ್ನೇಹಿತೆಯಾಗಿ ನನ್ನೊಂದಿಗಿದ್ದವಳು'' ಎನ್ನುತ್ತಾನೆ.

★★★★

ಸಾಹೇಬರಿಗೂ ಅವರ ಪತ್ನಿಯರಿಗೂ ಇದ್ದ ಇಂತಹ ಅನೇಕ ಅಸಹಜ ಸಂಬಂಧಗಳಿಗೂ ಗೌರವ ಮನ್ನಣೆಗಳಿದ್ದವು. ಕಂಪನಿಯ ಅಧಿಕಾರಿಯಾಗಿದ್ದ ಹೆನ್ರಿ ಲಿಟಲ್‌ಟನ್ ಎಂಬಾತನ ಉಯಿಲು ಇದನ್ನು ಪ್ರಮಾಣೀಕರಿಸುತ್ತದೆ. ರಾಜಾ ಎಂಬ ಬ್ರಾಹ್ಮಣ ಮಹಿಳೆಯನ್ನೂ ಪತ್ನಿಯಾಗಿ ಪಡೆದಿದ್ದ ಈತ ತನ್ನ ಎಲ್ಲಾ ಆಸ್ತಿ ಸಂಪತ್ತುಗಳನ್ನು ಅವಳ ಹೆಸರಿಗೇ ಮಾಡಿದ್ದ. ಜಾನ್ ಪ್ಯಾಟರ್ ಎಂಬ ಜನರಲ್‌ನದೇ ಬೇರೆ ಕತೆ. ತನ್ನ ಹೆಂಡತಿಯನ್ನು ಬಹಳವಾಗಿ ಆತ ಪ್ರೀತಿಸುತ್ತಿದ್ದ. ಆತನ ಹೆಂಡತಿ ಸತ್ತಾಗ ಕ್ರೈಸ್ತರ ಸ್ಮಶಾನದಲ್ಲಿ ಹೂಳಲು ಅವನಿಗೆ ಅನುಮತಿ ಸಿಗಲಿಲ್ಲ. ಆತ ಆಕೆಯನ್ನು ಎಲ್ಲಿ ಹೂಳಿದನೋ ಆ ಗೋರಿಯ ಮೇಲೆ ಅವಳ ಸ್ಮರಣಾರ್ಥವಾಗಿ ಒಂದು ಚರ್ಚ್ ಕಟ್ಟಿದ.

ಬ್ರಿಟಿಷ್ ಮಿಲಿಟರಿ ಜೀವನದಲ್ಲಿ ಭಾರತೀಯ ಉಪಪತ್ನಿಯರ ಉಪಸ್ಥಿತಿ ಒಂದು ಸಾಮಾನ್ಯ ವೈಶಿಷ್ಟ್ಯವೇ ಆಗಿತ್ತು ಎಂದು ರಿಚರ್ಡ್ ಬರ್ಟನ್ ತಮ್ಮ ಆತ್ಮಕಥನದಲ್ಲಿ ಬರೆಯುತ್ತಾರೆ. ಬರೋಡಾದಲ್ಲಿ 1840ರಲ್ಲಿ ಹಿಂದು ಮಹಿಳೆಯೊಂದಿಗೆ ಬಾಂಧವ್ಯ ಹೊಂದಿರದಿದ್ದ ಅಧಿಕಾರಿಗಳೇ ಇರಲಿಲ್ಲ. ಹೆಚ್ಚಿನಲ್ಲಿ ನಿಯಮ ಬಾಹಿರ ಸಂಬಂಧಗಳು ಒಂದು ತಾತ್ಕಾಲಿಕ ಒಪ್ಪಂದ ಆಗಿದ್ದದು. ಪಡೆಗಳು ಆ ಸ್ಥಳ ಬಿಟ್ಟು ತೆರಳಿದಾಗ ಈ ಒಪ್ಪಂದಗಳೂ ಕೊನೆಗೊಳ್ಳುತ್ತಿದ್ದವು. ಆದರೆ ಹೆಚ್ಚಿನ ಪ್ರಸಂಗಗಳಲ್ಲಿ ಉಪಪತ್ನಿಯರೂ ಸಹ ಪಡೆಗಳೊಂದಿಗೆ ತೆರಳಿ ತಮ್ಮ ಆಶ್ರಯದಾತರೊಂದಿಗೆ ಹಲವಾರು ವರ್ಷಗಳ ಕಾಲ ವಾಸಿಸುತ್ತಿದ್ದರು; ಅವರ ಮಕ್ಕಳನ್ನು ಹೆರುತ್ತಿದ್ದರು. ಕೆಲವೊಮ್ಮೆ 'ಮಕ್ಕಳು ಬೇಡ' ಎಂಬ ನಿಯಮವನ್ನೂ ಹಾಕಲಾಗುತ್ತಿತ್ತು. ಅವನ್ನು ಕೂಡ ಪಾಲಿಸಲಾಗುತ್ತಿತ್ತು. ಗರ್ಭಧಾರಣೆಯನ್ನು ತಪ್ಪಿಸುವಂತಹ ನಿಶ್ಚಿತ ಉಪಾಯಗಳೂ ಆ ಮಹಿಳೆಯರ ಬಳಿ ಇದ್ದವು.

ಸಾಹೇಬರು ತಮ್ಮ ನಾಡಿಗೆ ಮರಳಿದಾಗ ಪತ್ನಿಯರು ಹಾಗೂ ಉಪಪತ್ನಿಯರನ್ನು ಇಲ್ಲೇ ಬಿಟ್ಟು ತೆರಳಿದರು. ತಮ್ಮ ಆಶ್ರಯದಾತರು ನೌಕೆಗಳನ್ನೇರಿ ಹೊರಟಾಗ ನದೀ ದಂಡೆಯಲ್ಲಿ ತಮ್ಮ ಮಕ್ಕಳೊಂದಿಗೆ ನಿಂತು ಅವರಿಗೆ ವಿದಾಯ ಕೋರುತ್ತಿದ್ದ ದೃಶ್ಯವಂತೂ ಮನ ಕಲಕುವಂತಿತ್ತು. ಭಾರತೀಯ ಮಹಿಳೆಯೊಬ್ಬಳು ಹಾಡಿದ ಸಮಕಾಲೀನ ಲಾವಣಿಯಲ್ಲಿ ಆ ವಿದಾಯ ಅಳಲು ತುಂಬಿದೆ.

ಇದು ನಿನ್ನದೇ ಇಚ್ಛೆ ತೊರೆಯಬೇಕು ನಾ ನಿನ್ನ
ಓ ಪ್ರಿಯತಮ ನಿನ್ನ ದುಃಖ ಕಾಡದಿರಲೆಂದು
ಸ್ಮರಿಸಲೇಬೇಕು ನಾ ನಿನ್ನ ಅಗಲಿಕೆಯ
ನಿನಗೆ ಹೇಳಲೆಂದು ನನ್ನ ಆರ್ದ್ರ ಹೃದಯ ತೊಯ್ದಾಡಿತು

ಅಪಹರಿಸುತ್ತಾಳೆ ಬೇಗನೆ ನಿನ್ನ ಮನವ
ಓರ್ವ ಬ್ರಿಟಿಷ್ ಚೆಲುವೆ
ಅರಿಷ್ಟ್ಯೊ ಅವಳ ನಗುವೇ
ಮಾಡಲೇಬೇಕಾದೀತು ನೀನವಳ ಪ್ರೇಮಯಾಚನೆ
ನಿನಗವಳು ಎಲ್ಲ ಸಂತೋಷ ಕೊಟ್ಟರೂ ಕೂಡ
ನಿನ್ನ ಬಡ ಹಿಂದುವ ದಯವಿಟ್ಟು ನೀ ಮರೆಯಬೇಡ

ಭಾರತೀಯ ಮಹಿಳೆಯರ ಅಸೂಯೆಯನ್ನು ಚಿತ್ರಿಸಿದ ಕೆಲವು ಮಹಿಳಾ ಸಾಹಿತಿಗಳು ಭಾರತಕ್ಕೆ ಹೊರಟಿದ್ದ ಯುವಕರನ್ನು ಈ ಮಹಿಳೆಯರಿಂದ ದೂರವಿರಬೇಕೆಂದು ಎಚ್ಚರಿಸಿದರು. ಮತಧರ್ಮಗಳ ವಸ್ತುಗಳ ಮೇಲೆ ಬರೆಯುತ್ತಿದ್ದ ಮೇಲಿ ಮಾರ್ಥಾ ಶೆರ್‌ವುಡ್ ಎಂಬ ಯಶಸ್ವೀ ಕಥೆಗಾರ್ತಿ

ಅನೇಕ ಇಂಗ್ಲೀಷ್ ಪತ್ನಿಯರು ಸ್ಥಳೀಯ ಪ್ರಿಯತಮೆಯರ ಅಸೂಯಪರತೆಯಿಂದಾಗಿ ತಮ್ಮ ಜೀವವನ್ನೇ ಕಳೆದುಕೊಂಡರು ಎಂದು ಪ್ರತಿಪಾದಿಸಿದ್ದಾಳೆ. ಆದರೆ, ಯಾವುದೇ ಒಬ್ಬಸಾಹೇಬ ಬಿಳಿ ಹುಡುಗಿಯನ್ನು ಮದುವೆಯಾದಾಗ ಎಷ್ಟೋ ವರ್ಷಗಳ ಅಗಲಿಕೆಯ ನಂತರವೂ ಆತನ ಹಳೆಯ ಪತ್ನಿ ಅಥವಾ ಉಪಪತ್ನಿ ಮೇಮ್ ಸಾಹೇಬಳಿಗೆ ಹಾಗೂ ಅವಳ ಮಕ್ಕಳಿಗೆ ಗೌರವ ಪ್ರೀತ್ಯಾದರಗಳನ್ನೇ ತೋರುತ್ತಿದ್ದಳು ಎಂಬ ಅಂಶಗಳೂ ದಾಖಲಾಗಿವೆ.

ಭೂಮಾರ್ಗದಲ್ಲಿ ಸಂಚಾರ ಹಾಗೂ ಉಗಿ ನೌಕೆಗಳು 19ನೇಯ ಶತಮಾನದ ಮೂರನೆ ದಶಕದಲ್ಲಿ ಆರಂಭಗೊಂಡಾಗ, ಇಂಗ್ಲೀಷ್ ಕನ್ಯೆಯರು ಗಂಡಂದಿರನ್ನು ಅರಸುತ್ತ ಭಾರತಕ್ಕೆ ಬರಲಾರಂಭಿಸಿದರು. ಸ್ಥಳೀಯರನ್ನು ಪತ್ನಿ ಉಪಪತ್ನಿಯರನ್ನಾಗಿ ಇಟ್ಟುಕೊಳ್ಳುವ ಪದ್ಧತಿಯನ್ನು ತಿರಸ್ಕಾರದಿಂದ ನೋಡಲಾಯಿತು. ಸ್ಥಳೀಯ ಸಂಬಂಧಗಳಿಂದ ದೂರವಿರುವಂತೆ ಇಂಗ್ಲೀಷಿನವರಿಗೆ ಸಲಹೆ ಸೂಚನೆಗಳನ್ನು ಕೊಡಲಾಯಿತು. ಮೇಮ್ ಸಾಹೇಬರು ಇಂತಹ ಪತ್ನಿಯರ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಒಂದು ಆಂದೋಳನವನ್ನೇ ಆರಂಭಿಸಿದರು. ಈ ಸಂಬಂಧಗಳಿಂದ ತಮ್ಮ ಸ್ಥಾನವೂ ಅಭದ್ರ, ಆಡಳಿತವರ್ಗಕ್ಕೂ ನಾಚಿಕೆಗೇಡಿನ ಪರಿಸ್ಥಿತಿ ಎಂದು ಭಾವಿಸಿದ ಅವರು ಈ 'ಬೀಬೀ' ವ್ಯವಸ್ಥೆಯ ನಿರ್ಮೂಲನೆಗೆ ಯಾವ ಪ್ರಯತ್ನಗಳನ್ನು ಕೈಬಿಡಲಿಲ್ಲ. ಹೀಗಾಗಿ ವಾತ್ಸಲ್ಯಮಯಿ ಹಾಗೂ ಒಳ್ಳೆಯ ತಾಯಂದಿರೂ ಆಗಿದ್ದ ಸಾವಿರಾರು ಸಂತೃಪ್ತ ಪತ್ನಿಯರನ್ನೂ ಮನೆಯಿಂದಾಚೆಗೆ ಅಟ್ಟಲಾಯಿತು. 1857ರಲ್ಲಿ ನಡೆದ ಸಿಪಾಯಿ ದಂಗೆಯ ನಂತರ ಭಾರತೀಯ ಮಹಿಳೆಯರನ್ನು ಪತ್ನಿಯರನ್ನಾಗಿ ಇಟ್ಟುಕೊಳ್ಳುವ ವ್ಯವಸ್ಥೆ ಹೆಚ್ಚುಕಮ್ಮಿ ಕಣ್ಮರೆಯಾಯಿತು. ■

(ಕೃಪೆ: ದಿ ಹಿಂದೂ)

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560085

To :
Smt/Sri

CPMG/KA/BG-8/99
Book-Post/News Letter